Koravanji

ಕೊರವಂಜಿ



ಏಪ್ರಿಲ್ ೧೯೪೧

ಸಂಪಾದಕರು :

ಶ್ರೀ॥ ರಾ. ಶಿ.

ಬರಹಗಾರರು :

ಶ್ರೀ॥ ಹೆಚ್. ಎಲ್. ಮೂರ್ತಿ

ಶ್ರೀ॥ ಯಜ್ಞಪಶು

ಶ್ರೀ॥ ರೇವಣ್ಣ

ಶ್ರೀ॥ ಕಾಪುತ್

ಶ್ರೀ॥ ಗಂಗಾಧರ

ಶ್ರೀ॥ ಹಾ. ರಾಮಸ್ವಾಮಿ

ಶ್ರೀ॥ ಬಿಳಿಯಂಗಿರಿಯವ

ಶ್ರೀ॥ ಚಾ. ವೆ.

ಶ್ರೀ॥ ಸೋಮಭಟ್ಟ

ಇತ್ಯಾದಿ, ಇತ್ಯಾದಿ.

ತಿಳಿನಗೆಯ ಮಾಸಪತ್ರಿಕೆ

ಬಿಡಿ ಪ್ರತಿ:—ಕೇವಲ ನಾಲ್ಕಾಣೆ.



ಗೋಪಾಲ: (ರೈಲಿನಲ್ಲಿ ತನ್ನ ಜೊತೆಯ ಪ್ರಯಾಣಿಕನನ್ನು ಕುರಿತು) ಏನ್ ಸಾರ್! ಸ್ಟೇಷನ್ ಸ್ಟೇಷನ್ನಲ್ಲಿಯೂ "ಟೀ" ಕುಡಿಯುತ್ತಾ ಬರುತ್ತಿದ್ದೀರಲ್ಲಾ?

ಆತ: ನೋಡೀ ಸಾರ್! ಈ ಪ್ರಯಾಣದಲ್ಲಿ ನೀವು ಎಷ್ಟು ಬಳಲಿದ್ದೀರಿ ಅಲ್ಲವೇ? ನನ್ನ ನೋಡಿದರೆ ಹಾಗೆ ಕಾಣುತ್ತೇನೇ? ನನ್ನ ಆಯಾಸ ಪರಿಹರಿಸಿ, ನನಗೆ ಶಕ್ತಿ, ಕಳೆ, ಕೊಡುತ್ತಾ ಇರುವುದೇ "ಟೀ"! ಈ "ಟೀ" ಬೇಕೊಂತ ಎಷ್ಟು ಜನ ಹಾತೊರೆಯುತ್ತಾರೆ ಗೊತ್ತೇ! ಅವರಿಗೆಲ್ಲ ಗೊತ್ತು "ಟೀ"ಯ ಬೆಲೆ. ನೀವೂ "ಟೀ" ಕುಡಿದು ನೋಡಿ ಒಂದು ಸಲ. ಆಮೇಲೆ "ಟೀ" ಕುಡಿಯುವುದರಲ್ಲಿ ನನ್ನನ್ನೇ ಮೀರಿಸಿಬಿಡುತ್ತೀರಿ!

ಟೀ

"ಟೀ" ಎಂದರೇನು? ಅದೊಂದು ಮಧುರವಾದ ಸುಲಭವಾಗಿ ತಯಾರಿಸಬಹುದಾದ, ಎಲ್ಲೆಲ್ಲೂ ದೊರಕುವ, ಸುಲಭ ಬೆಲೆಯ ಪಾನೀಯ. ದೇಹಕ್ಕೆಷ್ಟೇ ದಣಿವಾಗಿರಲಿ. ಅದನ್ನೆಲ್ಲ ಪರಿಹರಿಸಿ, ಬೇಜಾರು ಕಳೆದು, ಉತ್ಸಾಹ ಉಕ್ಕಿಸಿ, ಮನಸ್ಸನ್ನು ತಣಿಸುತ್ತದೆ. ಒಂದು ಕಪ್ "ಟೀ" ಸವಿದುನೋಡಿರಿ! ಆಗಲೇ ಅದರ ಗುಣ ನಿಮಗೆ ತಿಳಿಯುವುದು.

CTB 38


ಕೇಂದ್ರ "ಟೀ" ಬೋರ್ಡಿನವರಿಂದ ಪ್ರಚುರಪಡಿಸಲ್ಪಟ್ಟಿದೆ



MANYAM & CO., Bangalore, Madras, Madura. Bombay.

ಸ್ಟಾಕಿಸ್ಟರು: **ಮೆ॥ ಚಂದ್ರ ಸ್ಟೋರ್ಸ್,**

ಅವಿನ್ಯೂ ರಸ್ತೆ, : : : : ಬೆಂಗಳೂರು ಸಿಟಿ.



ವೈಟೋಫೆರಿನ್

(ಆಧುನಿಕ ಶಕ್ತಿವರ್ಧಕ ಟಾನಿಕ್)

ಇದರಲ್ಲಿ "ಎ" "ಬಿ" ಮತ್ತು "ಡಿ" ಎಂಬ ವೈಟಮಿನ್ನುಗಳೂ, ಐರನ್, ಕ್ಯಾಲ್ಸಿಯಂ ಮುಂತಾದ ಲೋಹ ವಿಶೇಷಗಳೂ, ಶುದ್ಧಗೊಳಿಸಿದ ತಾಮ್ರವೂ, ಮತ್ತು ಮಾಲ್ಟ್‌ಸಾರ, ಜೇನುತುಪ್ಪಗಳನ್ನು ಸೇರಿಸಿ ತಯಾರಿಸಿದ ಒಂದು ಅಮೃತ ಪಾನ. ಇದರಲ್ಲಿ ದೇಹಶಕ್ತಿಗೆ ಬೇಕಾದ ಸಕಲ ಔಷಧಗಳ ಸಮೂಹವೂ ಇದೆ. ಖಾಯಿಲೆಯಿಂದ ಎದ್ದವರಿಗೂ, ಬಸುರಿ ಬಾಣಂತಿಯರ ದೇಹ ದಾರ್ಢ್ಯಕ್ಕೂ ಇದು ಅತ್ಯುತ್ತಮವಾದ ಔಷಧ. ಸೇವಿಸಲು ಬಹಳ ರುಚಿಯಾಗಿಯೂ ಮತ್ತು ಮಧುರವಾಗಿಯೂ ಇದೆ.

★ ★

ತಯಾರಕರು :

ದಿ ಮೈಸೂರು ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲ್ಯಾಬೋರಟರಿ, ಲಿಮಿಟೆಡ್

ಮಲ್ಲೇಶ್ವರಂ : : ಬೆಂಗಳೂರು 3.

ಬರುತ್ತದೆ ! **ಕರಗದ ದಿನ !** **ನಿರೀಕ್ಷಿಸಿ !**

ಗುಡುಗಿನ ಗಡಸು, ಸಿಡಿಲಿನ ಹೊಡೆತ, ಮಿಂಚಿನ ಕಾಂತಿಯ ಬಿರುಸಾದ ರಭಸಕ್ಕೆ ಸಿಕ್ಕಿದ್ದರೂ ಧರ್ಮ, ನ್ಯಾಯ, ನೀತಿಗಳ ಅಚ್ಚಳಿಯದ ಅಡಿಗಲ್ಲಿನ ಮೇಲಿರುವ ನೇಗಿಲ ಯೋಗಿಯ ಜೀವನದ ಹೋರಾಟದ ನಾನಾ ಸಮಸ್ಯೆಗಳನ್ನೂ ದುರಂತದ ರುದ್ರ ಬೀಡಿನಲ್ಲಿ ದಾಟಿಸಿ, ಹಾಸ್ಯದ ಹೊನಲಿನಲ್ಲಿ ಹರಿಸುವ

ಶ್ರೀ|| ಕೆ. ಸಿ. ಚೌಡಪ್ಪರೆಡ್ಡಿ, ಬಿ.ಎ.,

ಅವರ ಚಿರ ನೂತನ ಗ್ರಾಮಾಂತರ ಕ್ರಾಂತಿಕಾರಕ ನಾಟಕ

'ಗಂಟ್ನುಂಗಪ್ಪನ ಗಲಾಟೆ'

ಆಡುವ ಮಕ್ಕಳಾದಿಯಾಗಿ ಮುದುಕರವರೆಗೂ ಇಡೀ ರೈತ ಸಂಸಾರವೆಲ್ಲಾ ದಣಿವು ಲೆಕ್ಕಿಸದೆ ದುಡಿದು ಜನತೆಗೆ ನಿಸ್ವಾರ್ಥ ಸೇವೆ ಸಲ್ಲಿಸುವ ಬಡ ರೈತ ಬೋರೇಗೌಡ !—ಆತನ ನೆತ್ತರನ್ನು ಹಿಂಜರಿಯದೆ ಹೀರುವ ಕರಾಳ ರಕ್ಕಸ 'ಗಂಟ್ನಂಗಪ್ಪ'—ಠಕ್ಕು, ಥಳಕು, ಕುಹಕ, ಕುತಂತ್ರಗಳಿಂದ ಜನಸಾಮಾನ್ಯವನ್ನು ಮೋಸಗೊಳಿಸಿ, ಸ್ವಾರ್ಥತೆಯನ್ನು ಸಾಧಿಸಿಕೊಳ್ಳುವ ಸಮಾಜ ದ್ರೋಹಿ 'ಗಂಟ್ನಂಗಪ್ಪ' !—ಇಂತಹ. ಸಾರ್ವಜನಿಕರ ಹಿತಶತ್ರುವಾದ ಮಹಾಖಳನಾಯಕ 'ಗಂಟ್ನಂಗಪ್ಪ'ನನ್ನು ಎದೆಗೆಡದೆ ಎದುರಿಸಲೂ, ನಾಡಿನ ನಿಸ್ವಾರ್ಥ ಸೇವಕ ಬಡರೈತ ಬೋರೇಗೌಡ, ರೈತ ಪ್ರತಿನಿಧಿ ರಾಮಪ್ಪನನ್ನು ಅತ್ಯಾದರದಿಂದ ಸ್ವಾಗತಿಸಲು ಸಾರ್ವಜನಿಕರು ಸಿದ್ಧರಾಗಬೇಕಾಗಿ ವಿನಂತಿ.

ಸೂಚನೆ :—'ಗಂಟ್ನಂಗಪ್ಪ' ಎಂಬ ಹೆಸರಿನ ಹಕ್ಕು ಕೃತಿಕಾರರಗಿದೆ. ಇದನ್ನು ಅವರ ಅನುಮತಿಯಿಲ್ಲದೆ ಬೇರಾವ ನಾಟಕ, ಚಲನ ಚಿತ್ರ ಇತ್ಯಾದಿಗಳಲ್ಲಿ ಬಳಸಕೂಡದು].

ವಿವರಗಳಿಗೆ :

ಕಾಮಧೇನು ಪಬ್ಲಿಕೇಷನ್ಸ್

ಶಂಕರಾಶ್ರಮ, ಎಲಹಂಕ ಪೋಸ್ಟ್,

ಬೆಂಗಳೂರು. ಉತ್ತರ ತಾಲ್ಲೂಕು.



ಸಂಪುಟ ೧೦ | ಏಪ್ರಿಲ್ ೧೯೫೧ | ಸಂಚಿಕೆ ೧

ಕುಹಕಿಡಿಗಳು

ಬಡವರು ಕಣ್ಣಲ್ಲಿ ರಕ್ತಸುರಿಸಿಕೊಂಡು ದುಡಿಯೋದರಿಂದಲೇ ಅವರಿಗೆಲ್ಲಾ ಕೆಂಪಗೇ ಕಾಣಿಸುತ್ತೆ—ರಾಜಕೀಯದಲ್ಲಿ—

* * *

ವರಮಾನ ತೆರಿಗೆ ಕೊಡೋ ಅಂತಸ್ತಿಗೆ ದೇವರು ತಂದರೆ—ಅದನ್ನು ತಪ್ಪಿಸಿಕೊಳ್ಳೋ ಬುದ್ಧಿ,—ಅದೇ ದೇವರೇ ಕೊಡುತ್ತಾನೆ.

* * *

ಶ್ರೀ ದೇಶಮುಖರ ಚಿತ್ರಗಳನ್ನು ನೋಡಿದಾಗಲೇ ನನಗೆ ಗೊತ್ತಿತ್ತು. "ನಶ್ಯದ ಮೇಲೆ ಸುಂಕ ಹೆಚ್ಚುತ್ತೆ" ಅಂತ. (ಪತ್ರ)

* * *

ಆರೋಗ್ಯ ತೆರಿಗೆ ವಸೂಲಿಗೆ ಹೋದಾಗ ಹೆಬ್ಬಿ ಗುಬ್ಬಾಲೆಯುವನೊಬ್ಬನು ಡಾಕ್ಟರ್ ಸರ್ಟಿಫಿಕೇಟ್ ತೋರಿಸಿ "ನೋಡ್ರಿ ನನಗೆ ಆರೋಗ್ಯವೇ ಇಲ್ಲ, ನನಗೆ ತೆರಿಗೆ ವಿನಾಯಿತಿ ಅಲ್ಲವೇ" ಎಂದನಂತೆ.

* * *

"ಈಗಿನ ರೇಷನ್ ಅಕ್ಕಿ ಆರಿಸೋ ಸಮಸ್ಯೆ ನಾನು ಪರಿಹಾರಮಾಡಿದ್ದೇನೆ. ನಿಮ್ಮ ಓದುಗರ ಅನುಕೂಲಕ್ಕಾಗಿ ಅದನ್ನು ತಿಳಿಸುತ್ತೇನೆ. "ಕಲ್ಲುಕುಟುಕನ ಹಕ್ಕಿ ಸಾಕಿದರೆ ಅದು ಅಕ್ಕಿ ಆರಿಸಿಕೊಡುತ್ತೆ" ಎಂದು ಒಬ್ಬ ಮಹಿಳೆ ಬರೆದಿದ್ದಾಳೆ.

* * *

ಬೆಂಗಳೂರಿನಲ್ಲಿ ಅಖಿಲ ಭಾರತ ಸಮ್ಮೇಳನಗಳು ಹೇರಳವಾಗಿ ಆದುವು. ಈಗ ಅಖಿಲ ಭಾರತ ವಸ್ತು ಪ್ರದರ್ಶನಗಳ ಸರದಿ. (ಹೇಳಿಕೆ)

—ಎರಡಕ್ಕೂ ಏನು ವ್ಯತ್ಯಾಸ!

* * *

ಯಾಕಪ್ಪಾ! ಮಗು ಅಳ್ತಾಯಿದಿ, ಕೂತುಕೋ ಎಂದರಂತೆ ನೋಡಿದವರು. ದವಡೆ ಹಲ್ಲು ಉದುರೋ ಹಾಗೆ ಹೊಡೆದರು. ಕೂತುಕೊಳ್ಳಕ್ಕೆ ಆಗುಲ್ಲ ಅಂತ ಅತ್ತನಂತೆ ಹುಡುಗ.

* * *

ಸ್ಟಾಲಿನ್ನರು ಉತ್ತರ ಕೊರಿಯನ್ನರಿಗೆ ಸಹಾಯ ಮಾಡುವುದಾಗಿ ಭರವಸೆ ಕೊಟ್ಟಿರುವರಂತೆ.

—ಇದಕ್ಕೆ ಉತ್ತರ:—ಟ್ರೂಮನ್ನರು ಯೂರೋಪಿಗೆ ಏರ್ ಏರ್ಸ್ ಹೋವರವರನ್ನು ಅಣುಬಾಂಬಿನೊಂದಿಗೆ ಕಳಿಸಿದರಂತೆ.

* * *

ಜರ್ಮನರು ಪುನಃ ಶಸ್ತ್ರಾಸ್ತ್ರರಾಗಲು ನಿರಾಕರಿಸಿದರಂತೆ.

—ಪಾಪ! ಏನು ಮಾಡಿಯಾರು! ಆ ಕಡೆ ಅಮ್ಮನ ಕಾಟ—ಈ ಕಡೆ ಗುಮ್ಮನ ಕಾಟ.

* * *

ಮಹಾ ಚುನಾವಣೆ ಹೊತ್ತಿಗೆ ಖಂಡಿತ ಸಕ್ಕರೆ ಅಭಾವ ಇಲ್ಲದಂತೆ ಹೊರ ದೇಶಗಳಿಂದ ಸಕ್ಕರೆ ತರಿಸುತ್ತೇವೆ. (ಅಭಯ)

—ಹಬ್ಬಕ್ಕಲ್ಲದಿದ್ದರೂ ಆ ಹೊತ್ತಿಗಾದರೂ ಸಿಹಿಬಾಯಾಗುತ್ತಲ್ಲ!

* * *

ಮುಂಜಾವಿಂದ ಸಂಜೆಯವರೆಗೆ ಕಾದಾಡೋ ಅಭ್ಯಾಸ ಇರೋದರಿಂದಲೇ ಲಾಯರುಗಳು ರಾಜಕೀಯಕ್ಕೆ ಹೆಚ್ಚಾಗಿ ತೊಡಗುತ್ತಾರಂತೆ.

* * *

ಹೈದರಾಬಾದಿನಲ್ಲಿ ಜನಗಣತಿ ಮಾಡಿದಾಗ ಕೇವಲ ಶೇಕಡಾ ೧೧ರಷ್ಟು ಹೆಚ್ಚುವರಿ ಎಂದು ಗೊತ್ತಾಯ್ತಂತೆ.

—ಇದರಲ್ಲಿ ಹುದುಗಿರುವ ಕಮ್ಯೂನಿಸ್ಟರೂ ಸೇರಿರುವರೇ?

* * *

ಪಾಕಿಸ್ಥಾನದ ಉಳಿತಾಯದ ಬಜೆಟ್ ನೋಡಿದ ಸಿಂಧಿ ನಿರಾಶ್ರಿತನೊಬ್ಬನು "ಹೇಗೂ ಅಲ್ಲೇ ಇದ್ದಿದ್ದರೆ ಚೆನ್ನಾಗಿತ್ತೇನೊ" ಎಂದು ಹೇಳಲಿಲ್ಲವಂತೆ.

ಉರಿಗಾಳಿ

ವರ್ತಕರು ಕೇವಲ ಹಣ ಸಂಪಾದನೆಯನ್ನು ಪ್ರಾಮುಖ್ಯವಾಗಿಟ್ಟುಕೊಳ್ಳ ಬಾರದೆಂಬುದೇ ನನ್ನ ಆಶಯ (ಡಿಪ್ಟಿ ಕಮಿಷನರ್). ಡಿಪ್ಟಿಕಮಿಷನರುಗಳು ಕೇವಲ ಕಾನೂನು ಪಾಲನೆಯನ್ನೇ ಪ್ರಾಮುಖ್ಯವಾಗಿಟ್ಟುಕೊಳ್ಳಬಾರದೆಂಬುದೇ ನನ್ನ ಆಶಯ. (ವರ್ತಕ)

*	*	*

ಅಮೇರಿಕದಲ್ಲಿ ಭಾರತದ ಭಾಷಣಕಾರರ ಅವಶ್ಯಕತೆ ಹೆಚ್ಚಾಗಿದೆ. (ನಾರ್ಮ್ ಥಾಮಸ್) ಹಾಗಾದರೆ, ಅವರನ್ನು ರವಾನಿಸಿ ನಾವು ೨೦ ಲಕ್ಷ ಟನ್ ಗೋಧಿ ಬದಲಾಗಿ ಪಡೆಯಬಹುದಲ್ಲಾ.

*	*	*

ಕಮ್ಯೂನಿಷ್ಟರ ಹೃದಯ ಪರಿವರ್ತನೆಯಾಗಿಲ್ಲ (ಸಿ.ಆರ್.) ಅವರ ಹೃದಯ ಇನ್ನೂ ವಾಮ ಪಕ್ಷದಲ್ಲೇ ಇದೆ.

*	*	*

ಜ್ಯೋತಿಷ್ಕರ ಸಮ್ಮೇಳನ ಬೆಂಗಳೂರಲ್ಲಿ ಸೇರಲು ನಿಶ್ಚಯಿಸಿದೆ......... ಹಾಗಾದರೆ ನಮ್ಮೂರಿಗೆ ದೆಶೆ ಖುಲಾಯಿಸಿದೆ.

*	*	*

ಚುನಾವಣೆ ಕಾಲದಲ್ಲಿ, ಎಲ್ಲ ಪಕ್ಷ ಪ್ರತಿಪಕ್ಷಗಳ ಪ್ರನಿಧಿಗಳಿಗೂ ರೇಡಿಯೊ ಭಾಷಣ ಕೊಡುವ ಸ್ವಾತಂತ್ರ್ಯವುಂಟು. (ರಂ. ರಾ. ದಿವಾಕರ್) ಅದನ್ನರಿತು, ರೋಡಿಯೋಗಳನ್ನು ಮುಚ್ಚುವ ಸ್ವಾತಂತ್ರ್ಯ ನಮಗೂ ಉಂಟು, ತಾನೆ?

*	*	*

ಮೋಟಾರ್ ಗಾಡಿಗಳಲ್ಲಿ ಆಸ್ಪತ್ರೆಗಳನ್ನು ಸಿದ್ಧಗೊಳಿಸಿ, ಊರಿಂದೂರಿಗೆ ಒಯ್ಯಲಾಗುವುದು (ಸುದ್ದಿ) ಮೈಮೇಲೆ ಹರಿದು ಸಾಯದಿದ್ದರೆ, ಚಿಕಿತ್ಸೆ ಮಾಡಿ ಸಾಯಿಸುತ್ತಾರೆ.

*	*	*

ಐಸ್‌ಕ್ಯಾಂಡಿ ಅನಾರೋಗ್ಯವಾದ್ದರಿಂದ ಉತ್ತರ ಪ್ರದೇಶದಲ್ಲಿ ಅದನ್ನು ತಯಾರಿಸಲು ವಿದ್ಯುಚ್ಛಕ್ತಿ ಒದಗಿಸಲಾಗುವುದಿಲ್ಲವಂತೆ.....ಬೆಂಗಳೂರಲ್ಲಿ ಅದು ಇನ್ನೂ ಆರೋಗ್ಯಕಾರಿಯಾಗಿಯೇ ಇದೆ.

*	*	*

ಮಂತ್ರಿಗಳ ಕಾಲವೆಲ್ಲ ಆಹಾರ ಸಮಸ್ಯೆಯನ್ನು ಹೇಗೆ ಪರಿಹರಿಸುವುದು, ಎಂಬುದರಲ್ಲೇ ವ್ಯಯವಾಗುತ್ತಿದೆ. (ಲೇಖಕ) ಮಂತ್ರಿಗಳೇಕೆ? ನಮ್ಮ ಪಾಡೂ ಅಷ್ಟೆ.

*　　　*　　　*

ಮದ್ರಾಸಿನಲ್ಲಿ ಪರೀಕ್ಷೆಗೆ ಮುನ್ನವೇ ಪ್ರಶ್ನೆಪತ್ರಿಕೆ ಹೊರಬಿತ್ತು. (ಸುದ್ದಿ) ಮೈಸೂರಲ್ಲಿ ನಮಗೆ ತಿಳಿದಮಟ್ಟಿಗೆ, ಪರೀಕ್ಷೆಗೆ ಮುನ್ನ ಫಲಿತಾಂಶವೇ ಹೊರ ಬೀಳುತ್ತಿದೆ.

*　　　*　　　*

"ಕಾಂಪೌಂಡರುಗಳಿಂದ ಇಂಜೆಕ್ಷನ್; ಅನೇಕರ ಸಾವು" (ಶಿರೋನಾಮೆ) ದಕ್ಷ ರಾದ ಕಾಂಪೌಂಡರುಗಳು ಡಾಕ್ಟರುಗಳಷ್ಟೇ ಜಾಣರು, ಎಂದು ಈಗಲಾದರೂ ಮಹಾಜನರು ಒಪ್ಪಿಕೊಳ್ಳಬಹುದಲ್ಲವೆ?

*　　　*　　　*

ಬೆಳೆಗೆ ಆಗುತ್ತಿರುವ ನಷ್ಟವನ್ನು ತಪ್ಪಿಸಲು ಅತಿಕ್ರಮ ಪ್ರವೇಶಿಸುವ ದನ ಗಳಿಗೆ ತೀವ್ರವಾದ ದಂಡ ವಿಧಿಸುವುದು ಅತ್ಯವಶ್ಯಕವಾಗಿದೆ. (ಶ್ರೀ ಕೆ. ಟಿ. ಭಾಷ್ಯಂ) ಹಿಡಿದು ಬರೆ ಹಾಕುವುದೇ ಉತ್ತಮ.

*　　　*　　　*

ಈಚಲ ಬೀಜದ ಪುಡಿಯನ್ನು ಕಾಫಿಪುಡಿಗೆ ಬೆರೆಸುವುದಕ್ಕೆ ಮೊದಲು ಪ್ರಾರಂಭಿಸಿದ್ದು ಮದರಾಸಿನ ವರ್ತಕರು (ಬೆಂಗಳೂರು ಪತ್ರಿಕೆ) ನಮ್ಮ ವರ್ತಕರು ಲಾಗಾಯ್ತಿನಿಂದಲೂ ಕಾಫಿಪುಡಿಯನ್ನು ಈಚಲ ಬೀಜದ ಪುಡಿಗೆ ಬೆರೆಸುವರೇ ವಿನಹ ಮದರಾಸಿನವರ ಹಾಗಲ್ಲ.

*　　　*　　　*

ಚಪ್ರಾಸಿಗಳಿಗಿಂತ ಕಡಿಮೆ ವೇತನ ಉಪಾಧ್ಯಾಯರಿಗೆ ದೊರಕುತ್ತಿರು ವುದು ಅನ್ಯಾಯ (ಡಾ॥ ತಾರಾಚಂದ್) ಇದನ್ನೋದಿದ ಅನೇಕ ಉಪಾಧ್ಯಾಯರು ಚಪ್ರಾಸಿಗಳು ಅಂದರೆ ಯಾರು? ಆ ನೌಕರಿಗೆ ಅರ್ಜಿ ಹಾಕಬೇಕಾದರೆ, ಏನು ಮಾಡಬೇಕು, ಎಂದು ನಮ್ಮನ್ನು ವಿಚಾರಿಸುತ್ತಿದಾರೆ.

*　　　*　　　*

ಮದ್ರಾಸಿನಲ್ಲಿ ಕೋಟ್ಯಾಧೀಶ್ವರನಾಗಿರುವುದಕ್ಕಿಂತ ಬೆಂಗಳೂರಿನಲ್ಲಿ ಭಿಕ್ಷು ಕನಾಗಿರುವುದೇ ಮೇಲು (ಶ್ರೀ ಭಾಷ್ಯಂ) .. ಬೆಂಗಳೂರಿನಲ್ಲಿ ಅಷ್ಟು ಬೆವರು ಸುರಿಸ ಬೇಕಾಗಿಲ್ಲವೆಂತಲೋ ಏನೊ? (OR ಇನ್ನೂ ಒಂದಿಷ್ಟು ಭಿಕ್ಷುಕರ ಅಭಿಪ್ರಾಯ ಕೇಳಿ ತಿಳಿಯುವುದು ಮೇಲಲ್ಲವೆ?)

ಕೊರವಾವಲೋಕನ

ಕಾಮನಹಬ್ಬ. ಚೆನ್ನಾಗಿ ಹೋಳಿಗೆ ಮೆದ್ದು ಬಂದಿದ್ದೆವು ಕ್ಲಬ್ಬಿಗೆ. ಬ್ಲಾಕ್ ಮಾರ್ಕೆಟ್ ಬೆಲ್ಲ ತಿನ್ನಲು ಬಲು ಸಿಹಿ. ಕ್ಲಬ್ಬಿಗೆ ಬಂದವರೆಲ್ಲಾ ಎರಡೆರಡು ಲೋಟಾ ತಣ್ಣೀರು ಬಸಿದುಕೊಳ್ಳಲು ಶುರು ಮಾಡಿದ್ದೆವು. ಕೂತಿದ್ದವರ ಕೈಲೆಲ್ಲಾ ಗಾಜಿನ ಲೋಟಾ.

ಗಂಟಲು ಸರಿಪಡಿಸಿಕೊಳ್ಳುತ್ತಾ ಕೊರವ ಬಂದ. ಒಂದು ಸಾರಿ ನಮ್ಮನ್ನೆಲ್ಲಾ ಸುತ್ತು ನೋಡಿದ. "ನಾಗಾಲಿ ಅಡ್ತಂಡ್‌ವಾ" ಎಂದು ಕಾಣದ ಆಳಿಗೆ ಆಕಾಶವಾಣಿ ನುಡಿದ.

"ಏನು ತಿಂದ್ರಿ ಹೊಟ್ಟೆಗೆ" ಎನ್ನುವ ದೃಷ್ಟಿ ಬೀರಿದ.

"ನಾನಂಡೆ. ಕಾಮನಹಬ್ಬ—ಕೊಬರಿ ಬೆಲ್ಲ—ಹೋಳಿಗೆ. ಸಿಹಿ—ದಾಹ" ಎಂದು ತಂತಿ ಭಾಷೇಲಿ ಬಿಡಿನುಡಿದೆ.

"ಅಯ್ಯೋ! ಮಂಕುಗಳ್ರಾ. ಕಾಮನ ಹಬ್ಬದಲ್ಲಿ ಕಾಮನ್ನ ಸುಡುತ್ತಾರೆ. ಆ ದಿನವೇ ನೀವುಗಳು ಕಾಮ ಹೆಚ್ಚಾಗುವಂತೆ ಹೋಳಿಗೆ ತಿನ್ನುತ್ತೀರಲ್ರೋ! ನನ್ನ ಹಾಗೆ ತಿಳಿಸಾರು ಅನ್ನ, ನೀರುಮಜ್ಜಿಗೆ ಅನ್ನ ಉಣ್ಣಬಾರದಿತ್ತೇ! ಎಂದ.

ನಾವೆಲ್ಲಾ ಹೌದಲ್ಲಾ! ಎಂತ ಬಿರು ಬಿರು ನೋಡಿದೆವು.

ಆಗ ವೈದ್ಯನಂದ "ಕೊರವ ಈಗ ಹೇಗಿದೆ ಹೊಟ್ಟೆನೋವು. ಮೊನ್ನೆ ಔಷಧಿ ತೊಗೊಂಡು ಹೋದೋನು ತಿರುಗಿ ಬರಲೇ ಇಲ್ಲ" ಅಂತ.

ಕೊರವ ಕುರ್ಚಿ ಬರಲಿಲ್ಲವೆಂಬ ನೆಪ ಹೂಡಿ ವಾಚನ ಕೊಠಡಿಗೆ ನುಗ್ಗಿದ.

* * *

ಒಂದು ಕಾಗದದ ಚೀಲ. ಒಳಗೊಂದು ತೆಂಗಿನಕಾಯಿ ಹಿಡಿದುಕೊಂಡು ಬಂದ ಕೊರವ ಕ್ಲಬ್ಬಿಗೆ. ಆ ತುಂತುರು ಮಳೆ ಬಂದ ಸಾಯಂಕಾಲ.

"ನಾಳೆ ನಿಮ್ಮನೆಗೆ ಬರ್ತೀನಿ ತೆಂಗಿನ ಕಾಯಿ ಚಟ್ನೆ ತಿನ್ನುಕ್ಕೆ" ಅಂದೆ.

"ಬಾ, ಭೇಷಕ್ ಬಾ. ಅದಕ್ಕೇನಂತೆ. ಆದರೆ ನೋಡು ಈ ತೆಂಗಿನ ಕಾಯಿನ ಹಿನ್ನೆಲೆಯೆಲ್ಲಾ ಕಣ್ಣೀರು. ರಾಮು ಮಗಳ ಮದುವೇಗೆ ಹೋಗಿದ್ದೆ. ಅಲ್ಲೀದೆ ಈ ಸಂಪಾದನೆ. ರಾಮು ಚಪ್ಪರದ ಕೆಳಗೆ ಹೇಳಿಕೊಂಡು ಕಣ್ಣೀರಿಟ್ಟ. "ನೋಡು ಕೊರವ! ಕಾಲ ಹೇಗೆ ಕೆಟ್ಟುಹೋಯ್ತು. ವರಮಾನ ತೆರಿಗೆ ಕಛೇರಿ

ಯವನು ನಾನು. ಮಗಳ ಮದುವೆಗೆ ಎಲ್ಲರನ್ನೂ ಕರೆಯಬೇಕು. ಸುಮಾರು ಮೂರು ಸಾವಿರ ತೆಂಗಿನಕಾಯಿ ಅಂದಾಜು ಮಾಡಿ ತರಿಸಿದ್ದೆ. ಇನ್ನೂ ಸಾಯಂಕಾಲ ಏಳೇ ಗಂಟೆ ೨ ಸಾವಿರ ಕರ್ಚಾದುವು. ಈಗ ಇನ್ನೊಂದು ಸಾವಿರಕ್ಕೆ ತುರ್ತಾಗಿ ಹೇಳಿಕಳಿಸಿದ್ದೀನಿ.

"ಅದಕ್ಯಾಕಯ್ಯ ಕಣ್ಣೀರು. ಸಂತೋಷಪಡಬೇಕು" ಎಂದೆ. ರಾಮು ಹೇಳಿದ "ಅಯ್ಯೋ! ನಿನಗೆ ತಿಳಿಯದು, ತೆಂಗಿನಕಾಯಿಗೆ ಈಗ ಎಂಟಾಣೆ. ನಾಲ್ಕು ಸಾವಿರಕ್ಕೆ ೨೦೦೦ ರೂಪಾಯಿ ಕರ್ಚು.

ಅಳಿಯನಿಗೆ ಕೊಟ್ಟ ವರದಕ್ಷಿಣೆ ಎಷ್ಟು ಗೊತ್ತೆ? ಒಂದೇ ಸಾವಿರ!

ಅಲ್ಲಾ ತೆಂಗಿನಕಾಯಿ ಬೆಲೆಗಿಂತ ಬೆಲೆ ಕಡಿಮೆಯಾದ ಅಳಿಯ ಸಿಕ್ಕಿದ ನಲ್ಲಾ ಅಂತ ದುಃಖವಾಗುತ್ತೆ ಅಂದ.

ಈ ದುಃಖದ ಹಿನ್ನೆಲೆಯ ತೆಂಗಿನಕಾಯಿನಲ್ಲಿ ಚಟ್ನಿ ಮಾಡೋದು ಚೆನ್ನಲ್ಲ. ಮಾರೇ ಬಿಡೋಣ ಅಂತಿದೀನಿ ಅಂದ ಕೊರವ.

ನೀತಿಯ ಕತೆಗಳು

ಒಂದೂರಿನ ಹೊರಗೆ ಒಂದು ಕಾಡಿನಲ್ಲಿ ಒಂದು ಗುಹೆ ಇತ್ತಂತೆ. ಅಲ್ಲಿ ಒಂದು ಸಿಂಹ ವಾಸಮಾಡಿಕೊಂಡಿತ್ತಂತೆ. ಅದೇ ಗುಹೇಲಿ ಒಂದು ಸಂದೀಲಿ ಒಂದು ಇಲಿ ಸಂಸಾರ ಮಾಡಿಕೊಂಡಿತ್ತಂತೆ. ಪುಟ್ಟ ಸಂಸಾರ ಆದ್ದರಿಂದ ಸಿಂಹಕ್ಕೆ ಗೊತ್ತೇ ಇತ್ತಿಲ್ಲವಂತೆ— ಇಲಿ ಸಂಸಾರ ಮಾಡಿಕೊಂಡಿದೆ ಅಂತ.

ಆದರೆ ಇಲಿ ಸಂಸಾರ ಪುಟ್ಟ ಸಂಸಾರ ಆಗಿ ಎಷ್ಟು ದಿವಸ ಇರೋಕ್ಕಾಗುತ್ತೆ? ಸೆನ್ಸಸ್ ಹೊತ್ತಿಗೆ ಒಂದಕ್ಕೆ ಹದಿನಾರಾಯ್ತಂತೆ. ಸ್ಥಳ ಸಂಕೋಚ ಅದಕ್ಕಾಗಿ ದೊಡ್ಡ ಇಲಿ ಬಿಲದ ಹೊರಗೇ ಹಾಸಿಗೆ ಹಾಕಿಕೊಳ್ಳಲು ಆರಂಭಿಸಿತಂತೆ. ರಾತ್ರಿಯೆಲ್ಲಾ ದುಡಿದೂ ದುಡಿದೂ ಸುಸ್ತಾಗಿ ರಾಜಕಾರ್ಯ ಮುಗಿಸಿಕೊಂಡು ಮೃಗರಾಜ ಬರೋ ಹೊತ್ತಿಗೆ ದೊಡ್ಡಿಲಿ ಆದರ ಕಾಲು ಹತ್ತಿರವೇ ಸಿಕ್ಕಿತಂತೆ "ದರಿದ್ರ ಪ್ರಜೆಯೇ! ನನ್ನ ಅರಮನೇಗೆ ನಿನ್ನ ಯಾರು ಬಿಟ್ಟೋರು" ಅಂತ ರೇಗಿ ಮೃಗರಾಜ ಪಂಜ ಎತ್ತಿತಂತೆ, ಅಪ್ಪಳಿಸಿ ಹೊಡೆದು ಮರಣದಂಡನೆ ವಿಧಿಸಲು

ಆಗ ದೊಡ್ಡಿಲಿ ಹೇಳ್ತಂತೆ, "ನಿನಗೆ ಕಷ್ಟ ಬಂದಾಗ ಮೃಗರಾಜ, ನಾನು ನಿನಗೆ ಸಹಾಯ ಮಾಡುತ್ತೇನೆ, ನನ್ನ ಜೀವ ರಕ್ಷಿಸು" ಅಂತ. ಸಿಂಹಕ್ಕೆ ನಗು ಬಂತಂತೆ ಗಡ್ಡ ನೀವುತ್ತಾ ಹೇಳ್ತಂತೆ ನನ್ನಂತಹ ಪರಾಕ್ರಮಶಾಲಿಗೆ ನಿನ್ನಿಂದ ಏನುತಾನೆ ಸಹಾಯ ಆಗಬಹುದು. ಆದರೂ ನೀನು ಹೇಳಿದ್ದಕ್ಕೆ ಮೆಚ್ಚಿದೆ. ನಿನ್ನ ಜೀವ ಉಳಿಸಿದ್ದೀನಿ ಎಂತಂತೆ. ಪಂಜ ವಾಪಸ್ಸು ತೆಗೆಯಿತಂತೆ.

ದೊಡ್ಡಿಲಿ ಬಿಲಕ್ಕೆ ಹೋದಾಗ ಬಲು ಕುಪಿತವಾಗಿತಂತೆ. ಎಲ ಎಲಾ! ಈ ಯೆಲ್ಲಾ ಗುಹೆತನ್ನದೇ ಎಂದು ಎಗರಾಡುತ್ತಲ್ಲ ಈ ಸಿಂಹ. ಬಲ ಇದೆಎಂತ ಬೆದರಿಸುತ್ತಲ್ಲ ಇದಕ್ಕೆ ಬುದ್ಧಿ ಕಲಿಸಬೇಕು ಎಂದು ಉಪಾಯ ಹೂಡಿ ಸಂಸಾರ ದೊಂದಿಗೆ ಸನ್ನಾಹಮಾಡಿತಂತೆ.

ಹತ್ತಿರವೇ ಇದ್ದ ಬೇಡನೊಬ್ಬನ ಮನೆ ಗುರ್ತುಮಾಡಿಕೊಂಡು ಅವನ ಉಗ್ರಾಣ ಬರಿದು ಮಾಡಿದುವಂತೆ. ಆತ ರೇಗಿ ಇಲಿಗಳನ್ನು ಹೊಡೆಯಲು ಬಂದಾಗ ಮೆಲ್ಲಗೆ ಓಡಿ ಓಡಿ ಗುಹೆ ಹತ್ತಿರಕ್ಕೆ ಬಂದುವಂತೆ. ಬೇಡ ಸಿಂಹದ ವಾಸನೆ ಹಿಡಿದನಂತೆ. ಆ ವೇಳೆಗೆ ಹಣವಂತ ಶಿಕಾರಿಯೊಬ್ಬರು ಆ ಕಾಡಿಗೆ ಬರುವುದು ಅವನಿಗೆ ಗೊತ್ತಿತ್ತಂತೆ. ಅವರಿಗೊಂದು ಸಿಂಹದ ಶಿಕಾರಿ ಮಾಡಿಸಿ ದರೆ ಬೇಡನಿಗೆ ನೂರು ರೂಪಾಯಿ ಬಹುಮಾನ.

ಬೇಡ ಉಗ್ರಾಣ ಮರೆತು, ಹಣವಂತ ಶಿಕಾರೀನ ಕರೆದು ತಂದು ಬಲೆ ಒಡ್ಡಿ ಸಿಂಹಾನ ಹಿಡಿದುಕೊಂಡು ಹೋದನಂತೆ.

ದೊಡ್ಡ ಇಲಿ ಮೀಸೆ ತಿರುವಿತಂತೆ, ಮನೆಯುವರೆದುರಿಗೆ.

ನೀತಿ :—ಸಮಯಸಿಕ್ಕಾಗ ಕೊಂದುಹಾಕಬೇಕು.

ದಯಾ ದಾಕ್ಷಿಣ್ಯ ತೋರಿದರೆ ದೇಹಕ್ಕೇ ಊನ.

"ಹಿತೋಪದೇಶದಿಂದ"

ಇನಾಮು ಗ್ರಾಮಗಳನ್ನು ರದ್ದುಗೊಳಿಸಲಾಗುವುದರಿಂದ, ಅನೇಕರು ಅವುಗಳನ್ನು ಇನಾಮಾಗಿಯೇ ಕೊಡಲು ಆಸಕ್ತಿ ತೋರಿಸುತ್ತಿರುವರಂತೆ.

ಈ ಕನಸು

— ೧ —

ಈ ಕನಸು........
ಆಗುವುದು ಎಂದು ನನಸು ?

ಡಾಲರಿನ ಟ್ರೂಮನಗೆ
ರಷ್ಯಕಂಡರೆ ಮೆಣಸು—
ದೂರದೇಶ್ಯವನೆಲ್ಲ
ತಿಂದು ತೇಗುವ ಕಣಸು,
ಚೀಣ ಕೊರಿಯುವ ನುಂಗಿ
ಮೆರೆಯುವಾ ಕನಸು.

— ೨ —

ಕುಡುಗೋಲು–ಸುತ್ತಿಗೆಯು
ರಷ್ಯ ಕಾಣುವುದೆಲ್ಲ
ವಿಶ್ವವೇ ಕೆಂಪಾಗಿ
ಹೊಳೆಯುವಾ ಕನಸು.
ಚೀಣ ಉತ್ತರ ಕೊರಿಯ
ವಿಯತನಾಮುಗಳೆಲ್ಲ
ತನ್ನ ಬಲೆಯನೆ ಸೇರಿ
ತೊಳಲಲೆಂದಾ ಕನಸು.

— ೩ —

ಭಾರತದ ಬಡಜೀವ
ಕಾಣುವಾ ಹೊಂಗನಸು
ಎಂದು ಮುಗಿಯುವುದು
ಈ ಕ್ಷುದ್ಬಾಧೆ ಹೊಲಸು
ಪುನಃ ಹನ್ನೆರಡೌನ್ಸು
—ಹೊಟ್ಟೆ ತುಂಬುವ ತಿನಿಸು—
ದೊರೆತು ಎನ್ನಯ ಕನಸು
ಆಗುವುದೆ ಪೂರ್ಣ ನನಸು ?

—ಹೆಚ್. ಎನ್. ಮೂರ್ತಿ.

ಓಲೆಗೊಂದು ಓಲೆ

ವಿಠ್ಠಲರಾಯರ ಸ॥ ಕ್ಕೆ.

ಬುಕ್ಕಾಂಬುದಿ

ತಾ॥........ .. ..

ಬಾಲಕ ಯಜ್ಞಪಶುವಿನ ಅನಂತಾನಂತ ಶರಣಾರ್ಥಿಗಳು. ಯಾವುದಾಗಿ ಉಭಯ ಕುಶಲೋಪರಿ ಅಂತ ಬರೆಯಲಿ? ನೀವು ಕೊಪ್ಪಕ್ಕೆ ವರ್ಗವಾಗಿ ಹೋದಲಾಗಾಯ್ತು ನನ್ನ ಪಾಡು ಬೇಡ. ನಿಮ್ಮ ಅನುಯಾಯಿಯಾದ ನಾನು ನಾಯಿ ಎಂದೇ ಭಾವಿಸಿದಂತಿದೆ ಈ ಜನ. "ಎಷ್ಟು ದೆಬ್ಬೆ ಬಿಗಿದರೇನು ಡೊಂಕು ಡೊಂಕೇ" ಎಂದು ತಾವು ಹಾಕಿಕೊಟ್ಟ ಮೇಲ್ಪಂಗ್ತಿಯಂತೆ ನಡೆಯುವ ನನ್ನನ್ನು ಪೀಡಿಸುವರು. ನೀವು ನನ್ನ ಗುರುಗಳೆಂದು ನಾನು ಹೇಳಿದ್ದು ಇಲ್ಲಿನವರನ್ನು ಗುರ್ ಗುರ್ ಅನ್ನುವಂತೆ ಮಾಡಿದೆ.

ಯಾರು ಏನಾದರೂ ಅನ್ನಲಿ ತಮ್ಮ ಮಾತು ಮೀರಬಾರದೆಂದು ನನ್ನ ಆಸೆ. "ಗಜ ಗಂಭೀರವಾಗಿ ನಡೆದಿರಲು ಅಜ ಅರಚಿದರೇನು?" ಎಂದು ತಾವು ಹೇಳಿದ ನೀತಿಯಮಾತು ಎಡದಕಿವಿಹೊಕ್ಕು ಬಲದ ಕಿವಿಯಿಂದ ಹಾದುಹೋಗದೆ ಮೇಲಕ್ಕೇರಿ ನಡುನೆತ್ತಿಯಲ್ಲಿ ಖಾಯಂ ಆಗಿ ನಿಂತಿದೆ. ಒಟ್ಟಿನಲ್ಲಿ ನಿಯತ್ತಿರುವವನಿಗೆ ಇದು ಕಾಲವಲ್ಲ ...ಮಾಮೂಲುಗಳೆಲ್ಲಾ ಸಂಪ್ರದಾಯದಂತೆ ಸಾಂಗವಾಗಿ ನಡೆದುಕೊಂಡು ಹೋಗುತ್ತಿದೆ. ಬಾಳೆಹೊನ್ನೂರಿನಿಂದ ಕಾಗದ ಬಂದಿಲ್ಲ. ನಿಮಗೇನಾದರೂ ಬಂದಿತ್ತೆ?... ಈ ವಿಷಯದಲ್ಲಿ ನಾನು ನಿಮ್ಮ ಮಾತು ಮೀರಲಾರೆ. ಹೆಣ್ಣಿನ ಜೊತೆ ಸೇರು ಹೊನ್ನು ಹತ್ತಿಕರೆ ಬಾಗಾಯಿತು ಜಮೀನು ಕೈಲಿ ಮೂರು ಸಾವಿರ ಕೊಟ್ಟೇ ಕೊಡುತ್ತೇನೆಂತ ನಮ್ಮಭಾವಿ ಮಾವನವರು ಹಟ ಹಿಡಿದಿದ್ದಾರೆ. ಇಷ್ಟು ಭಾರಿ ವರದಕ್ಷಿಣೆ ಇತ್ಯಾದಿ ಕೊಡಲು ನನ್ನಲ್ಲಿ ಅವರು ಕಂಡದ್ದೇನು? ತಿಳಿಯದಾಗಿದೆ. ಹುಡುಗಿಯನ್ನು ನೀವು ನೋಡಿದ್ದೀರಾ? ಯಾಕೋ ಅನುಮಾನವಾಗುತ್ತಾ ಇದೆ ಹೆಣ್ಣಿನ ಬಣ್ಣ— ತಾವು ದಾರಿ ತೋರಿಸಬೇಕು.

ಆದಿಯಿಂದ ಅಂತ್ಯದವರೆಗೆ ನಮ್ಮ ದೇಶದಲ್ಲಿ ಜನ ಬಹಳ ಜನ ಬಹಳ ಅಂತ ಗೊಣಗುವ ಈ ಕಾಲದಲ್ಲಿ ನನಗೇಕೆ ಮದುವೆ? ಎಂದು ಸಹಜವಾಗಿ ಅನ್ನಿಸುತ್ತಿದೆ. ಈ ವಿಷಯದಲ್ಲಿ ದೀರ್ಘ ಪತ್ರ ಬರೆದು ವಿವರಿಸಿ.

ಹೆಚ್ಚು ಬರೆಯಲು ವಿಷಯವೇನೂ ಕಾಣೆ. ಹೌದು— ಶಂಕರಯ್ಯನದು ಮೃಗಶಿರ ನಕ್ಷತ್ರ. ಎರಡೇ ಪಾದವೆಂದು ಅವ ಹೇಳಿದ— ಅಲ್ಲ ಅಲ್ಲ ನಾಲ್ಕಿರಬೇಕೆಂದು ಹೇಳಿದೆ ಆ ಮೃಗಕ್ಕೆ. ನಿಮ್ಮ ಕುಮಾರಿ ಸೌ॥ ತಾರಾಮಣಿಗೆ ಈ

ಶಂಕರಯ್ಯ ತಕ್ಕವನಲ್ಲ—ಎಂದು ನನಗೆ ತೋರುತ್ತದೆ. ಕೇವಲ ಎಳೆನಿಂದ ಯಂತಾಡುತ್ತಾನೆ ಇವ. ಇಷ್ಟರಮೇಲೆ ತಮ್ಮಿಚ್ಛೆ. ಅಲ್ಲಿ ರಕ್ತ ಹೀರುವ ಜಿಗಣೆಗಳು ಹೆಚ್ಚೆಂದು ಕೇಳಿ ಬಲ್ಲೆ—ಹುಶಾರಾಗಿರಬೇಕೆಂದು ವಿನಂತಿ.

ಕಿರಿಯರಿಗೆಲ್ಲಾ ಆಶಿರ್ವಾದ—ಹಿರಿಯರಿಗೆ ನಮಸ್ಕಾರ
ನಿಮ್ಮ ಉತ್ತರ ಬಯಸುತ್ತಿರುವ
ತಮ್ಮ ಸೇವಕ
—**ಯಜ್ಞಪಶು.**

ಬಾಲಯಜ್ಞಪಶುವಿಗೆ—

ಕೊಪ್ಪ
ತಾ|| ... .

ವಿಠಲರಾಯನ ಆಶಿರ್ವಾದಗಳು. ನೀನು ಬರೆದ ಕಾಗದಾ ಕಂಡು ಆನಂದವಾಯಿತು. ಎಲ್ಲ ನನ್ನ ತರಪೇತಿನಂತೆ ನಡೆಯುತ್ತಿರುವುದು ಕೇಳಿ ಮತ್ತೂ ಸಂತೋಷವಾಯಿತು. ಬಾಳೆಹೊನ್ನೂರಿನವರು ಹೆಣ್ಣು ಕೊಡಲು ಬಂದಿದ್ದು ಸರಿ. ನಾನೇ ಕಳಿಸಿದ್ದೆ. ಹುಡುಗಿ ಅಪರಂಜಿ—ನಿನಗೆ ತಕ್ಕಾಕೆ ಜನಗಣತಿಗೆ ಹೆದರಿ ನೀನು ತಾಳಿ ಕಟ್ಟಲು ಹಿಂಜರಿಯಬಾರದು. ಬರೀ ಜನ ಹೆಚ್ಚು ಜನ ಹೆಚ್ಚು ಎಂದು ಅರಚುತ್ತಿದ್ದಾರಷ್ಟೆ. ನಮ್ಮ ದೇಶದಲ್ಲಿ ಜನ ಕಡಿಮೆಮಾಡಲು ಅನೇಕ ಶಕ್ತಿಗಳು ಕೆಲಸಮಾಡುತ್ತಿರುವುದನ್ನು ಕಾಣೆಯಾ? ಈಗ ದೊರಕುತ್ತಿರುವ ರೇಷನ್ ಆಹಾರದಲ್ಲಿ ಇನ್ನೆಷ್ಟು ದಿನ ಎಷ್ಟು ಜನ ಬದುಕಲು ಸಾಧ್ಯ?....ರೈಲು ಬಿತ್ತು—ಕಂಬಿ ಕಿತ್ತರು—ಮೋಟಾರು ನೆಗೆದುಬಿತ್ತು ಹಾರೋ ಪ್ಲೇನು ಹಾರಿದ್ದು ರೆಕ್ಕೆ ಹರಿದು ಮುರಿದ ಬಿದ್ದು ಸತ್ತಿತ್ತು ಇತ್ಯಾದಿ ಇತ್ಯಾದಿ ನೀನು ದಿನ ಪತ್ರಿಕೆ ವರದಿ ಓದುತ್ತಿರುವುರಲ್ಲಿ ಜನ ಬದುಕುತ್ತಿದ್ದಾರೆಂದು ತಿಳಿದಿದ್ದೀಯಾ? ಯೋಚಿಸಿ ಬರಿ. ಜನ ಸಂಖ್ಯೆಯನ್ನು ತಗ್ಗಿಸುವುದರಲ್ಲಿ ನಮ್ಮ ಸರ್ಕಾರ ಎಷ್ಟು ಅನುಕೂಲ ಒದಗಿಸಿದೆ ನೀನು ತಿಳಿದಿದ್ದೀಯಾ ಮಗೂ! ಹಳ್ಳಿ ಹಳ್ಳಿಗೂ ಆಸ್ಪತ್ರೆಗಳಿವೆಯೆ? ಇರುವ ಆಸ್ಪತ್ರೆಗಳಲ್ಲಿ ಡಾಕ್ಟರುಗಳಿದ್ದಾರೆಯೆ? ಇರುವ ಡಾಕ್ಟರುಗಳು ಸಾಯುವವರಿಗೆ ಕೊಡಲು ಔಷಧಿ ಆಸ್ಪತ್ರೆಯಲ್ಲಿದೆಯೆ? ಇದ್ದ ಔಷಧಿಯನ್ನು ಕೊಟ್ಟರೂ ಕೊಟ್ಟ ಔಷಧಿ ದಕ್ಕದೆ ಅನೇಕ ಮಂದಿ ನಿತ್ಯ ನಮ್ಮ ವೈದ್ಯರುಗಳ ಕೈಯಲ್ಲಿ ಸಾಯುತ್ತಿರುವುದು ಸುಳ್ಳೆ? ಇಷ್ಟೆಲ್ಲದರ ಅಂತರಂಗವೂ 'ಜನಸಂಖ್ಯೆ ಕಡಿಮೆ ಮಾಡುವುದಕ್ಕಾಗಿಯೇ ಎಂಬುದು ನೀನು ಗಮನಿಸಬೇಡವೆ?

ಪ್ರೊಮೋಷನ್‌ಗಾಗಿ ಕಾದ ನನ್ನನ್ನು ಕೆಳಕ್ಕೆ ತಳ್ಳಿ ಕೊಪ್ಪಕ್ಕೆ ಹಾಕಿದರು. ಇಲ್ಲೂ ಒಂದು ಇಸಮು ಸತ್ತೀತು ಎಂಬ ಅಭಿಪ್ರಾಯವೇ ಅಲ್ಲವೆ? ನೀನಾಗಿದ್ದರೆ

ಸಾಯದೆ ಬದುಕುತ್ತಿದ್ದಿಯಾ? ಇದೆಲ್ಲಾ ಮಸಲತ್ತು ದೇಶದ ಜನಸಂಖೆ ಇಳಿಸಲಿಕ್ಕಲ್ಲದೆ ಏರಿಸಲಿಕ್ಕೆ ಮಗು ಮಾಡುತ್ತಿರುವುದು? ಇನ್ನು ಹಳ್ಳಿಗಳ ಬೀಡಾದ ನಮ್ಮ ದೇಶದಲ್ಲಿ ಎಷ್ಟು ಹೆರಿಗೆ ಆಸ್ಪತ್ರೆಗಳಿವೆ? ಕಂತ್ರಿ ವೈದ್ಯರು (Quack Doctors) ಮಂತ್ರವಾದಿಗಳು ಕಡಿಮೆ ಇದಾರೆಯೆ? ಸರಿಯಾದ ಚಿಕಿತ್ಸೆ ಇಲ್ಲದೆ ಹುಟ್ಟಿದ ಶಿಶುಗಳು ಆರೋಗ್ಯ ಮಂತ್ರಿಗಳನ್ನು ಕೇಳಿ ಸಾಯಲು ಸಾಧ್ಯವೆ? ನೀನೇ ಹೇಳು? ಕ್ಷಯ—ಕಾಲರ—ಪ್ಲೇಗು—ಮಲೇರಿಯಾ (ಕೊಪ್ಪ ಇದಕ್ಕೆ ಪ್ರಸಿದ್ಧಿ) ಇವುಗಳನ್ನು ನಮ್ಮ ಸುತ್ತಾ ಬಿಟ್ಟಿರುವುದು ಜನಸಂಖ್ಯೆ ಕಡಿಮೆ ಮಾಡಲಿಕ್ಕಲ್ಲದೆ ಮತ್ತೇತಕ್ಕೆಂದು ತಿಳಿದಿರುವಿ ಮಗೂ?

ಬರೆಯುತ್ತಾ ಹೋದರೆ ಮಸಿ ದಂಡವಷ್ಟೆ. ಮಾಮೂಲು ತಪ್ಪಿಸಬೇಡ. ಖಂಡಿತ ಬಾಳೆಹೊನ್ನೂರು ಹುಡುಗಿ ಒಪ್ಪಿಕೊ ಹೆದರಬೇಡ. ಆ ಭಾರಿ ವರ ದಕ್ಷಿಣೆ ವರೋಪಚಾರ ಕೊಡಲು ಅವರು ನಿನ್ನಲ್ಲಿ ಕಂಡದ್ದು ನನ್ನ ಶಿಷ್ಯತ್ವವಲ್ಲದೆ ಬೇರೇನೂ ಅಲ್ಲ. ಬಾಳೆಹೊನ್ನೂರು ಹೆಣ್ಣು ಸುಲಿದ ಬಾಳೆಹಣ್ಣು. ಸೌ|| ತಾರಾಮಣಿಗೂ ಆ ಶಂಕರಯ್ಯ ಒಪ್ಪಿಗೆ ಇಲ್ಲವೆಂದು ಅವಳು ಮಾಡಿದ ಸೊಟ್ಟ ಮೂತಿ ನೋಡಿ ತಿಳಿದುಕೊಂಡೆ. ಇಲ್ಲೆ ಸೂಟಿಯಾದ ಹುಡುಗನನ್ನು ನೋಡಿದ್ದೇನೆ. ಅವ ಹೋಟಲಿಟ್ಟಿದ್ದಾನೆ. ಹುಡುಗಿಗೆ ಅನ್ನಕ್ಕೆ ಭಯವಿಲ್ಲ.

ಇನ್ನು ಜಿಗಣಿಗಳ ವಿಚಾರ ಅವು ಇಲ್ಲಿಮಾತ್ರವಲ್ಲ ಎಲ್ಲೆಲ್ಲೂ ಇರುವುವಲ್ಲವೆ! ಇಲ್ಲಿ ಎಲ್ಲಾ ಕ್ಷೇಮ—ಬಾಳೆ ಹೊನ್ನೂರಿನಲ್ಲಿ ಲಗ್ನಕ್ಕೇ ಇನ್ನು ಭೇಟಿ ಎಂದು ತಿಳಿದಿದ್ದೇನೆ.

ಹೆಚ್ಚು ಮುಂದಿನ ಪತ್ರದಲ್ಲಿ.

ಇತಿ ನಿನ್ನ

ವಿಠ್ಠಲರಾಯ.

ವಿಠಲರಾಯರ ಸ|| ಕ್ಕೆ.

ಬುಕ್ಕಾಂಬೂದಿ

ತಾ||....................

ಬಾಲಕನ ನಮಸ್ತೆಗಳು. ನೀವು ಹೇಳಿದ್ದನ್ನು ಎಂದಾದರೂ ನಡೆಸದೆ ಇದ್ದೇನೆಯೆ? ಮುಂದಿನ ತಿಂಗಳು ಬಾಳೆಹೊನ್ನೂರಿಗೆ ಬರಬೇಕೆಂದು ಬೇಡುವೆ. ಲಗ್ನಪತ್ರಿಕೆ ಅಚ್ಚಿನಲ್ಲಿದೆ. ಚಿ|| ಸೌ|| ತಾರಾಮಣಿ ವಿಷಯ ಕೇಳಿ ಸಂತೋಷವಾಯಿತು. ಇನ್ನೇನು ವಿಶೇಷವಿಲ್ಲ, ವಿಶ್ವಾಸವಿರಲಿ.

ಇತಿ ನ||ಗಳು

ಯಜ್ಞಪತಿ.

ವಿಜ್ಞಾನ ಯುಗ

ವಿಜ್ಞಾನ ಯುಗವೆಂದರೇನು ? ಕಲಿಯುಗದ ಉತ್ತರಾರ್ಧಕ್ಕೆ ಗಂಡುಗಲಿಗಳು ಈ ಹೆಸರನ್ನು ಹೇಳುವರು.

ವಿಜ್ಞಾನ ವೆಂದರೇನು? ವಿಶೇಷವಾದ ಜ್ಞಾನ; ಸಾಮಾನ್ಯವಲ್ಲದ ತಿಳಿವಳಿಕೆ. ಉದಾ : ಎರಡೂ ಎರಡೂ ಸೇರಿದರೆ ನಾಲ್ಕು, ಇದು ಜ್ಞಾನ; ಎರಡು ರಾಜಕಾರಣಿಗಳೂ ಎರಡು ರಾಜಕಾರಣಿಗಳೂ ಸೇರಿದರೆ, ಸೊನ್ನೆ ಎಂಬುದು ವಿಜ್ಞಾನ. ನೂರು ಕುರಿ ನೂರು ಕುರಿ ಸೇರಿದರೆ ಇನ್ನೂರೆಂಬುದು ಜ್ಞಾನ. ಒಂದು ತೋಳ, ಎಂಬುದು ವಿಜ್ಞಾನ. ಅಣು ಬಾಂಬು ಸಿಡಿದರೆ ಅವನತಿ ಎಂಬುದು ಜ್ಞಾನ, ಜಯ ಎಂಬುದು ವಿಜ್ಞಾನ.

ವಿಜ್ಞಾನದ ಪ್ರಯೋಜನವೇನು? ನೀರೊಳಗಿರ್ದುಂ ಬೆವರದೆ ಇರಬಹುದು, ಕೈಲಾಸದ ಮೇಲೆ ಹಾರಾಡಬಹುದು. ನರಮನುಷ್ಯನೇ ಇಲ್ಲ ಎನ್ನಿಸಬಹುದು, ರೋಗಿಗಳಿಗೆಲ್ಲ ಹೆಚ್ಚು ಆಯುಸ್ಸು ಕೊಡಬಹುದು, ಒಬ್ಬನ ರಕ್ತಹೀರಿ ಮತ್ತೊಬ್ಬ ಬದುಕಬಹುದು, ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಅತಿ ಶೀಘ್ರದಲ್ಲಿ ಪಲಾಯನ ಮಾಡಬಹುದು, ಇತ್ಯಾದಿ.

ನಾವು ವಿಜ್ಞಾನಿಗಳಾಗುವ ಬಗೆ ಹೇಗೆ? ಯಾವುದಾದರೂ ವಿಶ್ವವಿದ್ಯಾನಿಲಯಕ್ಕೆ ದಾಖಲಾಗಿ ನಾಲ್ಕು ವರ್ಷ ಓಡಾಡಿದರಾಯಿತು; ಅಥವ, ಆದರ ಮೂಲೆಯಲ್ಲಿ ಕುಳಿತು, ಸುಮುಹೂರ್ತ ಬಂದಾಗ, ಚಟುವಟಿಕೆ ತೋರಿಸಿದರಾಯಿತು.

ವಿಜ್ಞಾನಿಯ ಲಕ್ಷಣಗಳೇನು? ಗಾಳಿ ತುಂಬಿದ ಬುರುಡೆ, ಗಾಜಿನ ಕಣ್ಣು, ಜೋಬೀ ಷರಾಯಿ, ಮೊಣಕ್ಕೈ ಷರಟು.

ಕುಂಬಳ ಕಾಯಿ ಕಳ್ಳ ಎಂದರೆ,
ಸಂಬಳ ಸ್ವಲ್ಪವೂ ಸಾಲುಲ್ಲ ಎಂದನಂತೆ.

ತುಮಕೂರಿನವ

ಪ್ರತಿ ಒಂದು ರೈಲು ಡಬ್ಬಿಯೊಳಗೂ ಒಬ್ಬ ಬುದ್ಧಿವಂತ ಇರುತ್ತಾನೆ. ಅವನು ನೋಡದ ಊರುಗಳಿಲ್ಲ; ಹತ್ತದ ಮೆಯಿಲ್ ಗಾಡಿಗಳಿಲ್ಲ; ಮೋಸ ಮಾಡದ ಮಾಸ್ತರುಗಳಿಲ್ಲ; ಉಲ್ಲಂಘಿಸದ ರೂಲುಗಳಿಲ್ಲ. ಅವನು ಉದ್ದಕ್ಕೂ ತೊಡೆ ತಟ್ಟಿಕೊಂಡು ಜಂಬ ಕೊಚ್ಚಿಕೊಳ್ಳುತ್ತಾ ನಾಲಗೆ ಚಪ್ಪರಿಸುತ್ತಿರುತ್ತಾನೆ. ಉಳಿದವರೆಲ್ಲ ಅವನಿಗೆ ಕಾಫಿ ತರಿಸಿಕೊಟ್ಟು ಅವನ ಸಿಗರೇಟಿಗೆ ಬೆಂಕಿ ತೋರಿಸುತ್ತ, ಅವನ ಸುಳ್ಳುಗಳನ್ನು ನುಂಗಲು ಬಾಯಿ ತೆರೆದು ಕೂತಿರುತ್ತಾರೆ, ಅವನೆದುರು


ಅವತ್ತಿನ ನಮ್ಮ ಬುದ್ಧಿವಂತ, ತುಮಕೂರಲ್ಲಿ ಹತ್ತಿದ, ಅರಸೀಕೆರೆ ತನಕ ನಮ್ಮ ಡಬ್ಬಿಯಲ್ಲೇ ಪ್ರಯಾಣಮಾಡಿದ. ಅವನು ಭಾರತ ವರ್ಷವೆಲ್ಲ ಸುಮಾರು ತಿರುಗಿದಾನೆ. ಬೊಂಬಾಯಿ ಮಾತು ಬಂದಾಗ, ಅವನು, "ಥೂ! ಏನು, ಬೊಂಬಾಯಿ ಬೊಂಬಾಯಿ ಅಂತ ಯಾಕೆ ಜನ ಮರುಳು ಹೋಗುತ್ತಾರೆ ...ಬರೀ ಮಳೆ ಕೊಚ್ಚೆ ಕೆಸರು. ನಾನೊಂದು ಸಾರಿ ಹೋಗಿದ್ದೆ....ರೈಲು ಸ್ಟೇಷನ್ ಆಚೆ ಕಾಲಿಡುವುದಕ್ಕಾಗಲಿಲ್ಲ, ಕೊಚ್ಚೆ" ಎಂದ. ಕಲ್ಕತ್ತೆ? ಅಂತ ಯಾರೋ ಕೇಳಿದರು, ಅವನನ್ನ. ಕಲ್ಕತ್ತಾ ಆದರ ಅಪ್ಪ! ಬಿಸಿಲಿಗೆ ಕೊಡೆ ಹಿಡಿದರೆ, ಬಟ್ಟೆಗೇ ಬೆಂಕಿ ತಾಕಿದಂತಾಗ್ತದೆ....ನೋಡಿ. ಒಂದು ದಿವಸ ನಾನು ಹೂಗ್ಲಿ ಸೇತುವೆ ಮೇಲೆ ಹೋಗ್ತಿದ್ದೆ. ನನ್ನ ಮುಂದುಗಡೆ ಒಬ್ಬರು ದಪ್ಪನೆಯ ಬಂಗಾಳಿ....ಬಂಗಾಳಿಗಳೆಲ್ಲ ಭಾರಿ ದಪ್ಪ. ಮೀನು ಸಕ್ಕರೆ ಎರಡನ್ನೂ ತಿಂತಾರಂತೆ ಅವರು ...ಅದಕ್ಕೇ ಹಾಗೆ.. ಬೆಲ್ಲ ತಿಂದರೆ ಸಣಕಲಾಗ್ತಾರೆ ಅಂತ ಡಾಕ್ಟರ್ ಹೇಳೋಲ್ಲವೆ?....ಅವನೇನು ಮಾಡಿದ? ಆ ದಪ್ಪ ಬಂಗಾಳಿ.... ಕೊಡೇನ ಹೊಳೆಗೆ ಎಸೆದ ...ಯಾಕೊ, ಅಂದರೆ, ಉರಿ ಹತ್ತಿತ್ತು ಅಂದ.... ನೋಡಿದಿರಾ....ಕಲ್ಕತ್ತಾ ಶುದ್ಧ ಬೆಂಕಿ.. ಆಗ್ರಾ ಅಂತ ಒಂದೂರಿದೆ. ಅಲ್ಲಿ ಸೊಗಸಾದ ಬೆಳದಿಂಗಳು ಯಾವಾಗಲೂ ...ಮದ್ರಾಸಲ್ಲಿ ಬಾಯಿ ತೆರೆದರೆ ಮರಳು....ಪೂನಾದಲ್ಲಿ ಮೂಗು ಅರಳಿಸಿದರೆ, ಹೊಗೆ.... ಡಿಲ್ಲಿಯಲ್ಲಿ ಪೋಲೀ ದನಗಳ ಹಾವಳಿ ...ಗಡಿಯಾರದ ಗೋಪುರಗಳನ್ನೇ ಉರುಳಿಸಿ ಬಿಡುತ್ತವೆ" ಹೀಗೆ ಆ ಸರ್ವಜ್ಞ ಒಂದೊಂದೂರನ್ನೂ ಒಂದೇ ವಾಕ್ಯದಲ್ಲಿ ಪೂರೈಸಿ ಜನರ ಮೆಚ್ಚುಗೆ ಪಡೆಯುತ್ತಿದ್ದ.

ಅತನ ಬಾಯಿಂದ ಬೆಂಗಳೂರಿನ ಕೀರ್ತಿಯನ್ನು ಕೇಳಿ ತಿಳಿದು ಕೊಳ್ಳೋಣ, ಅಂತ. ಒಬ್ಬರು "ಸ್ವಾಮಿ! ಬೆಂಗಳೂರು?" ಎಂದರು. "ಬೆಂಗ ಳೂರೆ? ಬೆಂಗಳೂರಲ್ಲಿ ನಾಯಿ ಅವಾಂತರ ಜಾಸ್ತಿ....ಎಲ್ಲ ಊರುಗಳಿಗಿಂತ.... ಒಂದು ದಿನ ಬಳೇಪೇಟೇಲಿ ಹೋಗುತ್ತಾ ಇದ್ದೆ ನಾನು....ಕಾಲು ಸಂದಿನಿಂದಲೇ ತೂರಿಕೊಂಡು ಓಡಿದುವು ನಾಲ್ಕು... ಧಾವಂತದಲ್ಲಿ ಜಟಕಾ ಚಕ್ರಕ್ಕೆ ಸಿಕ್ಕಿ ಹೆದರಿಕೊಂಡು ಹೋಟಲೊಳಕ್ಕೆ ನುಗ್ಗೇ ಬಿಟ್ಟಿತ್ತು... ಕೋಳನಹಾಗೆ ಇವೆ.... ಪೇಟೆ ನಾಯಿಗಳು" ಅಂದರು. ಅರಸೀಕೆರೆಯಲ್ಲಿ ಅವರು ಇಳಿದಾಗ ಎಲ್ಲರೂ ಕಣ್ಣೀರು ಬಿಟ್ಟರು. "ತುಂಬಾ ಜಾಣರು, ಬುದ್ಧಿವಂತರು" ಎಂದು ಎಲ್ಲರೂ ಹೊಗಳಿದರು.

"ಹೌದು! ತುಮಕೂರಿನವರೇ ಹಾಗೆ....ಸರ್ವಜ್ಞರು" ಎಂದೆ, ನಾನು. ಆಗ, ಡಬ್ಬಿಯಲ್ಲಿದ್ದವರೆಲ್ಲರೂ ನನ್ನ ಮೇಲೆ ತಿರುಗಿಬಿದ್ದರು. "ಅಲ್ರಿ! ಒಂದು ದಿವಸ ಇವನು ಬಳೇಪೇಟೇಲಿ ಹೋದಾಗ ನಾಲ್ಕು ನಾಯಿ ನೋಡಿದ....ಆದ್ದ ರಿಂದ, ಬೆಂಗಳೂರಲ್ಲಿ ನಾಯಿ ಅವಾಂತರ! ಇವನು ಆಗ್ರಾಗೆ ಹೋದ ರಾತ್ರಿ ಬೆಳದಿಂಗಳಿತ್ತು. ಆದ್ದರಿಂದ, ಆಗ್ರಾದಲ್ಲಿ ಯಾವಾಗಲೂ ಬೆಳದಿಂಗಳು. ತುಮಕೂರಿನವ ಒಬ್ಬ ಇವತ್ತು ಎರಡುಗಂಟೆಕಾಲ ಈ ಇಪ್ಪತ್ತು ಜನಕ್ಕೆ ಸರ್ವಜ್ಞ; ಆದ್ದರಿಂದ, ತುಮಕೂರಿನ ಜನ ಎಲ್ಲ ಯಾವತ್ತೂ ಜಾಣರು.... ಯಾಕಾಗಬಾರದು?" ಅಂದೆ.

ಅವರೆಲ್ಲ ಕಿಟಕಿಯಾಚೆ ನೋಡುತ್ತ ಕುಳಿತುಕೊಂಡರು.

—ರೇವಣ್ಣ.



ಎಕ್ಸಿಭಿಷನ್ನಿಂದ ಮರಳಿದಳು ಮನೆಯಾಕೆ !

ನೀವು ದಡ್ಡರೇ?

ದಡ್ಡ, ಮೆದುಳಿಗೆ ಚುರುಕು ಸಾಲದು, ಎಳೆ ನಿಂಬೆಕಾಯಿ, ಎಂದು ಇತರರಿಂದ ಅನ್ನಿಸಿಕೊಂಡು ಬೇಸರವಾಗಿದ್ದರೆ, ಹೇ! ವಾಚಕ ಮಹಾಶಯಾ! ನಾನೊಂದು ಉಪಾಯ ಹೇಳಿಕೊಡುತ್ತೇನೆ, ನೀವು ಮತ್ತೆ ಮಹಾಜನಗಳ ಮನ್ನಣೆ ಸಂಪಾದಿಸಿ, ಮೆದುಳುವಂತ, ಜಾಣ, ಪಾದರಸ, ಹರಿತವಾದ ಬುದ್ಧಿ, ಎಂದು ಹೊಗಳಿಸಿಕೊಳ್ಳಬಹುದು.

ಬೆಳಗ್ಗೆ ಎದ್ದು, ಬೆಂಗಳೂರಿನ ಯಾವುದಾದರೂ (ಅಥವಾ, ನಿಮ್ಮ ಊರಿನ ಯಾವುದಾದರೂ) ಎಕ್ಸ್‌ಟೆನ್‌ಷನ್ ಕಡೆ ವಾಕಿಂಗ್ ಹೊರಡಿ. ಅಲ್ಲಿ ಹೊಸದಾಗಿ ಮನೆ ಕಟ್ಟಿಸುವ ಪಾಪಿಗಳು ಯಾರಾದರೂ ಸಿಕ್ಕೇ ಸಿಕ್ಕುತ್ತಾರೆ, ಟೇಪು ಹಿಡಿದು ನೆಲ ಅಳೆಯುತ್ತಿರುತ್ತಾರೆ, ಇಲ್ಲವೆ, ಇಟ್ಟಿಗೆಯನ್ನು ನೀರೊಳಗಿರಿಸಿ ಗಟ್ಟಿ ನೋಡುತ್ತಿರುತ್ತಾರೆ. ಅವರ ಹತ್ತಿರ ಹೋಗಿ, ಊರು ಕೇರಿ ಸೂತ್ರ ಗೋತ್ರ ವಿಚಾರಿಸಿ, ನಡುವೆ, "ಎಷ್ಟು ಅಂದಾಜು ಈ ನಿಮ್ಮ ಮನೆಗೆ?" ಎಂದು ಕೇಳಿ. ಅವರು ಯಾವ ಸಂಖ್ಯೆಯನ್ನು ಸೂಚಿಸಿದರೂ, ನೀವು ತಲೆ ಅಲ್ಲಾಡಿಸಿ; "ಛೆ! ಛೆ! ಅಷ್ಟು ಹಣ ಯಾವ ಮೂಲೆಗೆ! ಎನ್ನಿ; ಅದಕ್ಕಿಂತ ನಾಲ್ಕು ಸಾವಿರವಾದರೂ ಬೇಕೇ ಬೇಕು, ಎನ್ನಿ! "ನಿಮಗೆ ಗೊತ್ತಿಲ್ಲ ಸಾರ್! ನನ್ನನ್ನ ಕೇಳಿ. ನನಗೆ ಗೊತ್ತು", ಅನ್ನಿ....ಭುಜ ತಟ್ಟಿಕೊಂಡು ನಿಮ್ಮ ಅಡ್ರೆಸ್ ಅವರಿಗೆ ಕೊಡಿ, ಅಲ್ಲಿಂದ ಹೊರಡಿ. ನಿಮ್ಮ ಭವಿಷ್ಯ ಸರಿಹೋಗಿ, ನಿಮ್ಮನ್ನವರು ಬುದ್ಧಿವಂತರ ಗುಂಪಿಗೆ ಸೇರಿಸಿಯೇ ಸೇರಿಸುತ್ತಾರೆ

ಹಾಗೆಯೇ, ಕಾಲೇಜಲ್ಲೋದುವ ಹೆಣ್ಣು ಮಕ್ಕಳಿರುವ ತಂದೆಯರನ್ನು ಪತ್ತೆ ಹಚ್ಚಿ ಅವರ ಮನೆಗೆ ನುಗ್ಗಿ. "ಏನು, ಸಾರ್! ಮಗಳ ಮದುವೆ ಯಾವಾಗ?" ಎನ್ನಿ; ಅವರು "ಅನುಕೂಲ ಒದಗಿದಾಗ" ಎನ್ನುತ್ತಾರೆ; ಆಗ ನೀವು, "ಹಾಗೆಂದರಾಗದು ಸ್ವಾಮಿ! ಹುಡುಗಿಯನ್ನು ಮದುವೆ ಮಾಡಿಕೊಡುವ ಉದ್ದೇಶ ತಮಗಿದ್ದರೆ, ತಕ್ಷಣ ಓದು ನಿಲ್ಲಿಸಿ; ಕಾಲೇಜಿಂದ ಹಿಂದಕ್ಕೆ ಕರೆಸಿ; ಅವಳು ಮುಂದು ಮುಂದಕ್ಕೆ ಓದುತ್ತ ಓದುತ್ತ, ಮದುವೆ ಹಿಂದು ಹಿಂದಕ್ಕೆ ಬೀಳುತ್ತೆ, ನನಗೆ ಗೊತ್ತು" ಅನ್ನಿ; ಅಡ್ರೆಸ್ ಕೊಟ್ಟು, ಹೊರಕ್ಕೆ ಬನ್ನಿ. ನಿಮ್ಮ ಭವಿಷ್ಯ ನಿಜವಾದಾಗ, ಅವರು ನಿಮ್ಮನ್ನು ಬಲು ಜಾಣ ಎಂದು ಹೊಗಳುತ್ತಾರೆ.

ರೇಷನ್ ಷಾಪಿನ ಮುಂದೆ ಹೋಗಿ, ಅಲ್ಲಿ ಒಬ್ಬರನ್ನು ಹಿಡಿದುನಿಲ್ಲಿಸಿ, "ನೋಡುತ್ತಿರಿ! ಮುಂದೆ ರೇಷನ್ ಇನ್ನೂ ಕಡಿಮೆಯಾಗುತ್ತದೆ" ಎನ್ನಿ, ಬಸ್ ಸ್ಟಾಪ್‌ಗೆ ಹೋಗಿ, ಅಲ್ಲಿ ನಿಂತಿರುವ ಕ್ಯೂ ಮಹನೀಯರಿಗೆ, "ಯಾಕೆ ವೃಥಾ ಕಾಲಕ್ಷೇಪ ಮಾಡುತ್ತೀರಿ, ಬಸ್‌ನಲ್ಲಿ ಸೀಟಿಲ್ಲ; ಭರ್ತಿ ಬರುತ್ತೆ; ಮೆಲ್ಲ ಮೆಲ್ಲಗೆ ಕಾಲು ಹಾಕಿ" ಎನ್ನಿ. ಅಂಗಡಿ ಸಾಲಿಗೆ ಹೋಗಿ ಗಿರಾಕಿಗಳನ್ನು ನಿಲ್ಲಿಸಿ, "ಸ್ವಾಮಿ! ಈಗ ಹೋಗಿ ಕೇಳಿದರೆ, ಪಂಚೆ ಇಲ್ಲ ಎಂದೇ ಹೇಳುತ್ತಾರೆ, ಕತ್ತಲಾದ ಮೇಲೆ ಬನ್ನಿ, ಒಬ್ಬರೇ ಇರೋವಾಗ ಕೇಳಿ" ಎನ್ನಿ, ಸಿನಿಮಾ ಮಂದಿರಗಳ ಮುಂದೆ ತಪಸ್ಸು ಮಾಡೋ ಕಾಮಣ್ಣಂದಿರಲ್ಲೊಬ್ಬನನ್ನು ಸಮೀಪಿಸಿ, "ಶುದ್ಧ ಮೋಸ ಸ್ವಾಮಿ, ಚಿತ್ರ; ಬರೀ ಬೂಟಾಟಿಕೆ. ಇದರ ಜಾಹಿರಾತು, ಅರ್ಧಗಂಟೆಯಲ್ಲಿ ಎದ್ದು ಬರ್ತೀರಾ ಈಚೆಗೆ, ಹಳೆಯ ಹಾಡು, ಹುಳಿತ ಹಾಸ್ಯ, ಅಶ್ಲೀಲ ಕೂಡ ಅಷ್ಟಾಗಿ ಇಲ್ಲ", ಎನ್ನಿ; ಜಟಕಾ ಸ್ಟ್ಯಾಂಡಿಗೆ ಹೋಗಿ "ಜಟಕಾದಲ್ಲಿ ಹೋಗೋದಕ್ಕಿಂತ ನಡೆಯುವುದೇ ವಾಸಿ; ಕೈಕಾಲಾದರೂ ಉಳಿಯುತ್ತವೆ" ಅನ್ನಿ; ರೈಲು ಸ್ಟೇಷನ್ ದಾರೀಲಿ ಓಡೋರನ್ನ ತಡೆದು, "ಯಾಕ್ರಿ ಇಷ್ಟು ಆತುರ! ಇವತ್ತು ರೈಲು ಹೊರಡುವುದು ಅರ್ಧ ಗಂಟೆ ತಡ, ಬರುವುದು ಒಂದು ಗಂಟೆ ಲೇಟು" ಅನ್ನಿ... ನೀವು ಹೇಳಿದ್ದೆಲ್ಲ ನಿಜವಾಗ್ತದೆ; ನಿಮ್ಮ ಮಾತು ಕೇಳಿದವರೆಲ್ಲ ನಿಮ್ಮನ್ನು ಕೊಂಡಾಡುತ್ತಾರೆ; ನಿಮ್ಮ ಮಾತನ್ನು ಕೇಳದವರೆಲ್ಲ ಅಯ್ಯೋ, ಎಂದು ಕೊರಗುತ್ತಾರೆ, ನಿಮ್ಮ ಮೆದುಳು ತಮಗಿರಲಿಲ್ಲವಲ್ಲಾ ಎಂದು ಕರುಬುತ್ತಾರೆ.

—ಕಾಮತ್.



ಪರೀಕ್ಷೇಗೆ ಮುಂಚೆ ಒಂದಾಟ ಆಡಿದರೆ, ಬುದ್ಧಿ ತಿಳಿಯಾಗಿ
ಚುರುಕಾಗುತ್ತೇ ಕಣೋ! ಬಾರೋ!

ಗಂಟು

[‘ನಿಮ್ಮ ಹೆಂಡತಿಗೂ ನಿಮಗೂ ಹೇಗೆ ಗಂಟುಬಿತ್ತು ?’ ಎಂಬ ಪ್ರಶ್ನೆಯನ್ನು ನಮ್ಮ ಬಾತ್ಮಿದಾರರು ಕನ್ನಡನಾಡಿನ ಪ್ರಮುಖ ವ್ಯಕ್ತಿಗಳನ್ನು ಕೇಳಿದ್ದಕ್ಕೆ ಈ ತೆರನ ಉತ್ತರ ಬಂತು]

೧) ಅವಳು ನಮ್ಮ ನಂಟರ ಪೈಕಿ; ಹೊರಗಡೆಯೇ ಕೊಡಬೇಕು ಅಂತ ನಮ್ಮವರು ಬಹಳ ವರ್ಷಗಳು ಪ್ರಯತ್ನ ಪಟ್ಟರು ; ಸಾಧ್ಯವಾಗಲಿಲ್ಲ. ಕಡೆಗೆ, ವಿಧಿ ಇಲ್ಲದೆ ನನ್ನ ಕುತ್ತಿಗೆಗೇ ಕಟ್ಟಿದರು.

೨) ಅವಳು ನಮ್ಮ ನಂಟರ ಪೈಕಿ; ಹೊರಗಡೆಯಿಂದಲೇ ನನಗೆ ಹೆಣ್ಣು ತರಬೇಕು ಅಂತ ನನ್ನ ತಾಯಿ ತಂದೆ ಬಹಳ ವರ್ಷಗಳ ತನಕ ಪ್ರಯತ್ನ ಪಟ್ಟರು; ಸಾಧ್ಯವಾಗಲಿಲ್ಲ. ಕಡೆಗೆ ವಿಧಿ ಇಲ್ಲದೆ, ನಾನು ಅವಳನ್ನೇ ಕೊರಳಿಗೆ ಉರುಳು ಹಾಕಿಕೊಳ್ಳಬೇಕಾಯಿತು.

೩) ಅವಳನ್ನು ಮದುವೆಯಾದರೆ, ಅವಳ ತಂದೆ ಆಸ್ತಿಯ ಬಹು ಭಾಗ ನನಗೆ ದೊರೆಯಬಹುದೆಂಬ ಆಸೆಯಿಂದ ನಮ್ಮಪ್ಪ ಹೀಗೆ ಮಾಡಿದ.

೪) ಅವಳಿಗಾಗಿ ಗೊತ್ತಾಗಿದ್ದ ವರನ ಸೋದರ ಮಾವ ಲಗ್ನಕ್ಕೆ ಒಂದು ವಾರ ಹಿಂದೆ ತೀರಿಕೊಂಡು ಅಪಶಕುನ ತಂದೊಡ್ಡಿದ; ಹಪ್ಪಳ ಸಂಡಿಗೆ ವ್ಯರ್ಥವಾಗುತ್ತದಲ್ಲಾ ಅಂತ ಅದೇ ಲಗ್ನದಲ್ಲಿ ನನ್ನನ್ನು ಹಿಡಿದೊಯ್ದು ನನ್ನ ಕೈಗೆ ಅವಳ ಕೈಯನ್ನಿಟ್ಟರು.

೫) ವರ ಪೂಜೆ ದಿನ ಬೀಗರು ಕೋಪಿಸಿಕೊಂಡು ಊರಿಗೆ ಹೊರಟು ಹೋದಾಗ, ಅದೇ ರೈಲಲ್ಲಿ ಬೇರೊಂದೆಡೆಗೆ ಹೆಣ್ಣು ನೋಡಲು ಹೊರಟಿದ್ದ ನನ್ನನ್ನು, ಅವಳ ತಂದೆ ಇಳಿಸಿ, ತನ್ನ ಹೆಣ್ಣನ್ನು ತೋರಿಸಿ, ಒಪ್ಪಿಸಿ ಬಲವಂತದಿಂದ ಹೂಂ ಎನ್ನಿಸಿ, ಚಪ್ಪರದೊಳಕ್ಕೆ ನನ್ನನ್ನು ಎಳೆದೊಯ್ದರು. ಹಾಗಾದದ್ದು ನನ್ನ ಮದುವೆ.

೬) ನನ್ನ ರೂಪಿಗೂ ನನ್ನ ಮೂತಿ ಸೊಟ್ಟಗೂ ಈ ಮೆಳ್ಳಗಣ್ಣಿನವಳಲ್ಲದೆ ಮತ್ತೆ ಯಾರು ಸಿಕ್ತಾರೆ, ಹೇಳಿ. ನಾನೂ ನನ್ನ ಗೆಳೆಯನೂ ಇವಳ ಮನೆಗೆ ನೋಡಲು ಹೋಗಿದ್ದಾಗ. ಇವಳು ನನ್ನ ಗೆಳೆಯನೇ ನಾನು ಎಂದು ಮೋಸ ಹೋದಳು. ಅವನನ್ನೊಪ್ಪಿ ನನ್ನನ್ನು ಮದುವೆಯಾದಳು. ಈಗ, ಅವಳ ಮೆಳ್ಳಗಣ್ಣು ಮಂದಗಣ್ಣಾಗಿರುವುದರಿಂದ, ನಾವು ಅನ್ಯೋನ್ಯವಾಗಿದೇವೆ.

— o —

ಎಲ್ಲೈತೆ ?

★

ನ್ಯಾಯವ ಬಿಟ್ಟನ್ಯಾಯವ ಮಾಡುವ
ನಾಯಿಗೆ ನರಕವು, ಎಲ್ಲೈತೆ?
ಓದಿ ಕುತರ್ಕವ ವಾದಿಸಿ ಸಭೆಯಲಿ
ಮೋದಿಸುವಗೆ ಸೋಲಾದೀತೆ?
ಮೇದಿನಿಯೊಳು ಬಹು ಲಂಚವ ಬಳಸದೆ
ಮೋದವು ಇಂದಿಗೆ ಆದೀತೆ?
ಸತ್ಯವಹಿಂಸೆಯು ನಿತ್ಯವು ಬೋಧಿಸೆ
ತುತ್ತಿನ ನಾಲಿಗೆ ಸವೆದೀತೆ?
ಮಾಯಾ ಮಾಟವ ಮಾಡುವ ಮೆಂಬರ
ಹೇಯ ಹೀನತೆ ಹೊರ ಬಂದೀತೆ?
ಪಿತೂರಿಗಾರರ ಕುಹಕ ಕುತಂತ್ರ
ತುತೂರಿ ಸದ್ದಲಿ ಹೊಮ್ಮೀತೆ?
ಮಂಗಳ ಮಹಿಮನ ಗಾಂಧಿಯ ಮರೆದಾ
ಭಂಗನ ಕೀರುತಿ ನಾರೀತೆ?
ಪುತ್ಥಳಿ ಗೊಂಬೆಯು ಕುರ್ಚಿಲಿ ಕುಳಿತರೆ
ಭತ್ಯವ ತಿನ್ನದೆ ಎದ್ದೀತೆ?

—ಗಂಗಾಧರ.

ರೈಲ್ವೆ ದರ

[ರೈಲ್ವೆ ದರ ಹೆಚ್ಚಿಸಿರುವುದನ್ನು ಕುರಿತು ನಮ್ಮ ಬಾತ್ಮೀದಾರ ನಗರದ ಪ್ರಮುಖ ವ್ಯಕ್ತಿಗಳನ್ನು ಅಭಿಪ್ರಾಯ ಕೇಳಲಾಗಿ ಕೆಳಕಂಡ ಹೇಳಿಕೆಗಳು ಹೊರ ಬಿದ್ದುವು.]

೧. ಶ್ರೀ ಅಳಿಯ ದೇವರು : ಇನ್ನು ಮೇಲೆ ನನ್ನ ಹೆಂಡತಿ ಸಲಸಲಕ್ಕೂ ತವರುಮನೆಗೆ ಓಡಿಹೋಗುತ್ತೇನೆ, ಎಂದು ನನ್ನನ್ನು ಹೆದರಿಸುವಂತಿಲ್ಲ, ಹೆದರಿಸಿದರೂ, ನಾನೂ ಅವಳ ಮಾತನ್ನು ನಂಬಿ ಅಳುತ್ತ ಕೂರಬೇಕಾಗಿಲ್ಲ, ಅಷ್ಟು ಹಣ ಅವಳ ಸಂಗಡ ಎಲ್ಲಿಂದ ಬರಬೇಕು ?

೨. ಶ್ರೀ ಸರ್ಕಾರಿ ಸಾಹೇಬರು: ನನ್ನ ಪ್ರಯಾಣ ಭತ್ಯ ಇನ್ನು ಮೇಲೆ ನನ್ನ ಕೈಗೆ ಹೆಚ್ಚು ಉಳಿಯುವುದರಿಂದ, ನನಗಂತೂ ಲಾಭವೇ ಆಯಿತು.

೩. ಶ್ರೀ ಉಪಾಧ್ಯಾಯರು : ರೈಲ್ವೆ ನೌಕರರ ಸಂಬಳ ಸಾರಿಗೆ ಇದರಿಂದ ಹೆಚ್ಚುವುದು ; ಹೀಗಾಗಿ, ನನಗೂ ರೈಲ್ವೆ ಇಲಾಖೆಯ ತೋಟಿಗೂ ಇದ್ದ ವರಮಾನವ್ಯತ್ಯಾಸ ಹೆಚ್ಚುವುದು, ಜನ ನನ್ನನ್ನು ಇನ್ನೂ ಅವಹೇಳನಕ್ಕೀಡುಮಾಡುವರು.


೪. ಶ್ರೀ ಟಿಕೀಟ್ ಕೊಂಡುಕೊಳ್ಳದ ಮಹಾಶಯ : ನನಗಿದೊಂದು ಹೆಮ್ಮೆಯ ವಿಷಯ, ಎಂಟಾಣೆ ಉಳಿಸುತ್ತಿದ್ದ ನಾನು ಇನ್ನು ಮುಂದೆ ಒಂಬತ್ತಾಣೆ ಉಳಿಸಬಹುದಾಗಿದೆ.

೫. ಶ್ರೀ ಲಾವಣಿ ಕುರುಡ ತಿರುಕ : ನನಗೆ ಕೊಡೋ ಕಾಸನ್ನೆಲ್ಲ ರೈಲ್ವೆಯವರೇ ಕಸಿದುಕೊಳ್ಳುತ್ತಿರುವುದರಿಂದ, ನನಗಿನ್ನು ಭಿಕ್ಷೆ ಕಡಿಮೆ, ವೃಥಾ ಕಂಠ ಶೋಷಣ.

೬. ಶ್ರೀ ತೀರ್ಥರೂಪರವರು : ಇದುವರೆಗೂ ಪರೀಕ್ಷೆ ಫಲಿತಾಂಶ ಹೊರ ಬರುತ್ತಲೂ, ಅಪಮಾನಿತರಾದ ಗಂಡು ಹುಡುಗರು, ನನ್ನ

ಕಿಸೆಯಲ್ಲಿ ಅದಕ್ಕಾಗಿಯೇ ನಾನು ಇರಿಸುತ್ತಿದ್ದ ಹಣವನ್ನು 'ಕದ್ದು' ಬೊಂಬಾಯಿಗೋ ಕಲ್ಕತ್ತೆಗೋ ಪರಾರಿಯಾಗುತ್ತಿದ್ದರು; ಇನ್ನು ಮುಂದಕ್ಕೆ ಅಲ್ಲಿಯ ತನಕದ ರೈಲು ಚಾರ್ಜನ್ನು ನಾನು ಹೇಗೆ ಇರಿಸಲಿ? ಅವರಿಂದ ಹೇಗೆ ಪಾರಾಗಲಿ?

೭. ಶ್ರೀ ಬಂಜೆರಾಯರು : ಸದ್ಯಃ, ಮಕ್ಕಳೇ ಆಗದು, ಇನ್ನು ನನಗೆ. ನರಕದಲ್ಲಿ ನರಳಿದರೂ ಪರವಾಗಿಲ್ಲ, ಮಕ್ಕಳಾಗಿ ಅವರಿಗೆ ಎಂಜನೀರಿಂಗ್ ಕಾಲೇಜಲ್ಲಿ ಸೀಟಿಗಾಗಿ ಅವರಿವರ ಕಾಲುಕಟ್ಟಿ, ಕಣ್ಣೀರು ಹರಿಸುವುದನ್ನು ಆ ಗೋಪಾಲಸ್ವಾಮಿ ಅಯ್ಯಂಗಾರರು ತಪ್ಪಿಸಿದರು. ರಾಮೇಶ್ವರಕ್ಕೆ ಹೋಗಿ ನಾಗಪ್ರತಿಷ್ಠೆ ಮಾಡೋಣ, ಗೋಕರ್ಣಕ್ಕೆ ಹೋಗಿ ಗೋಗರೆಯೋಣ, ಪ್ರಯೋಗಕ್ಕೆ ಹೋಗಿ ಪ್ರಯಾಸ ಪಡೋಣ ಅಂತ ಆಕೆ ಹಿಂಸೆ ಕೊಡುತ್ತಿದ್ದಳು. ಇನ್ನು ಅದಕ್ಕೆಲ್ಲ ಹಣ ಎಲ್ಲಿಂದ? ಆದ್ದರಿಂದ, ನಾವು ಇನ್ನು ಹೀಗೆಯೇ ಹೊರಟು ಹೋಗಿಬಿಡಬಹುದು.



ಲೋ! ಪಿಲ್ಟು! ನೀನು ಹೋಗಿ ಚೆಂಡನ್ನ ಇಸ್ಕೊಂಡು ಬಾರೊ.

ಯಾವುದು ಕಾಲೇಜು?

ಮೊನ್ನೆ ನಮ್ಮೂರಲ್ಲಿ ಒಂದು ಹೊಸ ಕಾಲೇಜು ಪ್ರಾರಂಭವಾಯಿತು. ಅಲ್ಲಿ ದಿನವೂ, ಭಾನುವಾರ, ರಜಾದಿನ, ಹಬ್ಬ ಹರಿದಿನ, ಬೇಸಿಗೆ ರಜ ಇವು ಯಾವುದೂ ಇಲ್ಲದೆ, ದಿನವೂ ೬ ಗಂಟೆಗಳ ಕಾಲ ವಿದ್ಯಾರ್ಥಿಗಳಿಗೆ ಪಾಠ ನಡೆಯುತ್ತದೆ. ಸುಮಾರು ೮೦೦ ವಿದ್ಯಾರ್ಥಿಗಳಿಗೆ ಅಲ್ಲಿ ಕಲಿಯಲು ಅವಕಾಶ ಇದೆ. ಅವರು ಕೊಡಬೇಕಾದ ರುಸುಮನ್ನೂ ಕೂಡ, ಅವರ ಆರ್ಥಿಕ ಸ್ಥಿತಿಗೆ ತಕ್ಕಂತೆ ನಿಷ್ಕರ್ಷಿಸಿದಾರೆ.

ಅಲ್ಲಿ ಗಣಿತ ಶಾಸ್ತ್ರ, ಚರಿತ್ರೆ, ನೀತಿಶಾಸ್ತ್ರ, ರಾಜತಂತ್ರ, ವಿಜ್ಞಾನ, ಭೂಗೋಳ ಶಾಸ್ತ್ರ, ಹಿಂದಿ, ತಮಿಳು, ತೆಲುಗು, ಇಂಗ್ಲೀಷು, ಕನ್ನಡ—ಇತ್ಯಾದಿ ಬಗೆ ಬಗೆಯ ವಿಷಯಗಳನ್ನು ಸುಲಭ ರೀತಿಯಲ್ಲಿ ಬೋಧಿಸುತ್ತಾರೆ. ಕಲೆಗೂ ಅಲ್ಲಿ ವಿಶೇಷವಾದ ಸ್ಥಾನವುಂಟು. ಹಲವು ಶ್ರೀಮಂತರಿಗೂ ಅಧಿಕಾರಿಗಳಿಗೂ ಅಲ್ಲಿ ಫೀಜನ್ನು ಮಾಫ್ ಮಾಡುವರಂತೆ.

ಶಿಕ್ಷಣ ಮಾಧ್ಯಮ:—ಅಲ್ಲಿ ಸಾಮಾನ್ಯವಾಗಿ ಹಿಂದಿಯೇ ಆಗಾಗ, ಅದರ ಸಂಸ್ಥಾಪಕರಿಗೆ ಮನ ಬಂದಾಗ, ತೆಲುಗನ್ನೂ, ತಮಿಳನ್ನೂ ಮಾಧ್ಯಮವಾಗಿ ಉಪಯೋಗಿಸುವುದೂ ಉಂಟು. ಪರಂಗಿಯವರ ಮ್ಲೇಂಛ ಭಾಷೆಯಾದ ಇಂಗ್ಲೀಷನ್ನು ಅಲ್ಲಿ ಮೈಲಿಗೆ ಟೈಂನಲ್ಲಿ ಮಾತ್ರ ಶಿಕ್ಷಣ ಮಾಧ್ಯಮವಾಗಿ ಅಳವಡಿಸಿಕೊಳ್ಳುತ್ತಾರೆ. ಇಂಗ್ಲೀಷ್ ಪಾಠ ಕೇಳಿದ ಮೇಲೆ, ಮನೆಗೆ ಹೋಗಿ ಸ್ನಾನ ಮುಗಿಸಿ ಊಟಕ್ಕೇಳುವ ಏರ್ಪಾಟನ್ನು ವಿದ್ಯಾರ್ಥಿಗಳು ಮಾಡಬೇಕೆಂಬುದೇ ಮಾಲೀಕರ ಆಶಯವಿದ್ದಂತೆ ತೋರುತ್ತದೆ.

ಅಲ್ಲಿ ಹೇಳಿಕೊಡುವ ಚರಿತ್ರೆಗೂ, ವಿಶ್ವವಿದ್ಯಾಲಯದ ಮುದ್ರೆಯನ್ನು ಒತ್ತಿಸಿಕೊಂಡಿರುವ ಇತರ ಕಾಲೇಜುಗಳಲ್ಲಿ ನಡೆಯುವ ಪಾಠಕ್ಕೂ ತುಂಬ ವ್ಯತ್ಯಾಸಗಳಿರಬಹುದು; ಆದರೂ, ಜನರು ಅಲ್ಲಿಯ ಸುಳ್ಳನ್ನೇ ನಿಜವೆಂದು ನಂಬಿ ಮೋಸ ಹೋಗುತ್ತಾರೆ. ಅಲೆಕ್ಸಾಂಡರನು ಜೀಪಿನಲ್ಲಿ ಬಂದು ಪಂಜಾಬನ್ನು ವಶಪಡಿಸಿಕೊಂಡ, ಜಹಾಂಗೀರನ ಕಾಲದಲ್ಲಿ ಟೆಲಿಫೋನಿತ್ತು, ಜಗತಲ

ಪ್ರತಾಪನೆಂಬ ರಾಜ ದಿನವೂ ರಾತ್ರಿ ನರಿಯ ದೇಹ ತಾಳುತ್ತಿದ್ದ—ಇತ್ಯಾದಿ ಪಾಠಗಳೇ ಚರಿತ್ರೆ. ಅಲ್ಲಿ ಹೇಳಿಕೊಡುವ ಭೂಗೋಳ ಶಾಸ್ತ್ರವೇ ವಿಚಿತ್ರ. ತಮಿಳು ನಾಡಿನಲ್ಲಿ ಅಗ್ನಿ ಪರ್ವತ, ನಾಗಲೋಕದ ಭೂಪಟ, ಮೋಡಗಳ ಮೇಲೆ ಕುಳಿತು ಅಥವಾ ಮೋಡಗಳನ್ನೇ ಚಪ್ಪಡಿಗಳ ಹಾಗೆ ಉಪಯೋಗಿಸಿ ಇಳಿದು ಬರುವ ನಾರದಾದಿ ನಾಗಲೋಕದವರು ಮುಂತಾದುವೇ ಅಲ್ಲಿಯ ಪಾಠಗಳು. ಆ ಕಾಲೇಜಿನ ವಿಜ್ಞಾನದ ಪ್ರಕಾರ, ತಲೆ ತಿರುಗಿದರೆ, ಇಡೀ ಕೋಣೆ, ಕಟ್ಟಡ, ಮನೆ, ಮಠ ಎಲ್ಲವೂ ಗಿರಗಿರನೆ ತಿರುಗುವುದು; ಆತ್ಮಹತ್ಯೆಯ ಯೋಚನೆ ತಲೆಯನ್ನು ಹೊಕ್ಕಕೂಡಲೇ, ಕೊಡಲಿ ಹಗ್ಗ, ನೀರು ನೇಣು, ವಿಷ—ಇವುಗಳು ಸಾಲಾಗಿ ಕಣ್ಣಿಗೆ ಕಾಣಿಸಿಕೊಳ್ಳುತ್ತವೆ—ಇವೇ ಮುಂತಾದ ತತ್ವಗಳೇ ಆ ಕಾಲೇಜಿನ ವಿಜ್ಞಾನ. ಗಣಿತವೂ ಕೂಡ ವಿಪರೀತವೇ. ಒಂದೂ ಒಂದೂ ಎರಡಲ್ಲ, ಮೂರು; ಒಬ್ಬರು ಮತ್ತೊಬ್ಬರನ್ನು ಒಂದೆಡೆ ಸಂದರ್ಶಿಸಿದರೆ, ಇಲ್ಲಿ ಪೊದೆಯ ಹಿಂದೆ. ಬೇರೊಬ್ಬ ಇದ್ದೇ ಇರುತ್ತಾನೆ; ಹತ್ತು ಸಾವಿರವೂ ಸೇರಿದರೆ, ಐದು ಸಾವಿರ! ಏಕೆಂದರೆ, ಹಣಕ್ಕೆ ಹಣ ಕೊಡುವ ಕಡೆ ಕಳ್ಳ ಒಬ್ಬ ಬಂದೇ ಬರುತ್ತಾನೆ.

ಹೀಗೆ ನಾನಾ ಶಾಸ್ತ್ರಗಳನ್ನೂ, ಜನಪ್ರಿಯ ಜಾಣಪದ ಗೀತೆಗಳನ್ನೂ ಬೋಧಿಸುವ ಸಿನಿಮ ಮನೆಗಳಲ್ಲೊಂದು ಮೊನ್ನೆ ನಮ್ಮೂರಲ್ಲೂ ಪ್ರಾರಂಭವಾಯಿತು. ಅಲ್ಲಿಯ ಪಾಠ ಪ್ರವಚನಗಳಿಗೆ ಸಹಾಯಕವಾಗಿ ಹಲವು ಪತ್ರಿಕೆಗಳೂ ಪಂಡಿತರೂ ಸಾಹಸದಿಂದ ವಿಷಯ ಸಂಶೋಧನೆ ವಿಚಾರ ಪ್ರತಿಪಾದನೆ, ಮಾಡುತ್ತಿವೆ. ನೂರು ಚಿತ್ರಗಳನ್ನು ಒಬ್ಬ ನೋಡಿ ಮುಗಿಸಿದ ಕೂಡಲೇ ಒಂದು ಪರೀಕ್ಷೆಯನ್ನಿಟ್ಟು, ೩೫ ನಂಬರ್ ಬಂದರೆ, ಪಾಸ್ ಎಂದು ಡಿಗ್ರಿ ಕೊಡೋದೊಂದೇ ಬಾಕಿ—ಅದನ್ನೂ ಮಾಡಿದರೆ, ಇತರ ವಿದ್ಯಾ ಸಂಸ್ಥೆಗಳಲ್ಲಿ ನೂಕುನುಗ್ಗು ಕಡಮೆಯಾಗುತ್ತದೆ. ಪ್ರಜಾಸತ್ತಾತ್ಮಕ ಪ್ರಪಂಚದಲ್ಲಿ ಪ್ರಜೆಗಳಿಗೆ ಬೇಕಾಗಿರುವುದನ್ನೊದಗಿಸುವುದೇ ಅಲ್ಲವೆ ಉತ್ತಮವಾದ ದಾರಿ?

—ರೇವಣ್ಣ.

ಕುಂಬಳಕಾಯಿ ಕಳ್ಳ ಎಂದರೆ, ನಾಲಿಗೇಲಿ ನೀರೂರಿತು.

ಹೊತ್ತು ಮೀರಬಾರದು !

ತುಂಬಿದ ಸಭೆ ಆಕಳಿಸಿತು ನೆರೆದ ಮಂದಿ ಮೈಮುರಿಯತೊಡಗಿದರು. ಕಾರ್ಯದರ್ಶಿಗಳ ಕಾತುರತೆಯು ಎಲ್ಲೆ ಮೀರಿ "ಕೇಕೆ ಹೊಡಿಯಲೆ?" ಎಂದು ಉಪಕಾರ್ಯದರ್ಶಿಯನ್ನು ಕೇಳಿದರು. ಆ ಉಪಕಾರ್ಯದರ್ಶಿ ಕೈ ಗಡಿಯ್ಯಾರ ನೋಡುತ್ತಾ, "ಬೇಡ ಸೀಟಿ ಹೊಡೆದರೇ ಚೆನ್ನ" ಎಂದು ಸೂಚಿಸಿದ. ಖಜಾಂಚಿ ಜೇಬು ಮುಟ್ಟಿ ನೋಡಿಕೊಂಡು "ಸಂಘದ ದುಡ್ಡು ದಂಡ ಹೀಗಾದರೆ" ಎಂದು ಪೇಚಾಡಿದ. ಪಕ್ಕದಲ್ಲೇ ಕೂತ ಧಾಂಡಿಗನೊಬ್ಬ ಅವಸರವಾಗಿ ಕಾರ್ಯದರ್ಶಿಗಳ ಅಂಗಿಯ ಕೊನೆ ಜಗ್ಗಿ, ಕೂಗಿ, "ಚರುಪೇನು?" ಎಂದು ಕೇಳಿದ. "ಹೋಗಯ್ಯ ಅಧ್ಯಕ್ಷರೇ ಬರಲಿಲ್ಲಾಂತ ವದ್ದಾಡುತ್ತಿರುವಾಗ ಚರುಪಂತೆ ಚರುಪು" ಎಂದು ಶಂಖ ಹೊಡೆದ ಆ ಕಾರ್ಯದರ್ಶಿ. ಮೂಲೆಯಲ್ಲಿ ಮುದುಡಿದ ಮುದಕರೊಬ್ಬರು ಉಪಕಾರ್ಯದರ್ಶಿಗಳ ಬೆನ್ನು ಬಡಿದು "ಪ್ರಸಾದ ವಿನಿಯೋಗದ ಹೊತ್ತಿಗೆ ಎಬ್ಬಿಸಿ" ಎಂದು ಮಲಗಿ ಗೊರಕೆ ಹೊಡೆಯ ತೊಡಗಿದ್ದರು. ಮಕ್ಕಳು ಅತ್ತ ಸದ್ದು ನಭೋ ಮಂಡಲ ಮುಟ್ಟಿತು.

"ಬಂದರು—ಬಂದರು" ಎಂಬ ಸದ್ದು ಕೇಳಿ ಬಂತು. ಅಧ್ಯಕ್ಷರು ಬಂದರು—ಏನು ಠೀವಿ ಏನು ಗಂಭೀರ—ಏನು ವಿದ್ಯಾ ವರ್ಚಸ್ಸು ಮುಖದ ಮೇಲೆ ಅಬ್ಬಬ್ಬಬ್ಬ ಎಂದು ಮಂದಿ ಮೂಗಮೇಲೆ ಬೆರಳಿಟ್ಟರು.

ಪ್ರಾರ್ಥನೆ ಸ್ವಾಗತ ಭಾಷಣ ಮುಗಿದದ್ದು ಜನಕ್ಕೆ ಅರ್ಧ ತೃಪ್ತಿಯಾಯಿತು. ಲವಂಗತಿಂದು ಗಂಟಲು ಸರಿಮಾಡಿಕೊಂಡು ಅಧ್ಯಕ್ಷ ಮಹಾಶಯರು ಭಾಷಣಕ್ಕೆ ಮೊದಲು ಮಾಡಿದರು. ಆ ಭಂಡ "ಹೊತ್ತು ಮೀರಬಾರದು" ಎಂಬ ವಿಷಯವಾಗಿ ನಾಲ್ಕು ಘಂಟೆಗೆ ಮೀರಿ ಮಾತಾಡಿ ನೆರೆದ ಸಭಿಕರನ್ನು ಸುಸ್ತು ಮಾಡಿದ.

ಮುಗಿದ್ದಲ್ಲಿಂದಲೇ ಆ ಮುದುಕ "ಜಗಭಂಡ-ನಾಚಿಕೆ ಇಲ್ಲದೆ ಮಾತಾಡ್ತಾನಲ್ಲಿ-ಹೊತ್ತು ಮೀರಿ ಬಂದದ್ದಲ್ಲದೆ ಎಲ್ಲೆ ಮೀರಿ ಅರ್ಧಘಂಟೆ ಎಂದವನು ನಾಲ್ಕು ಘಂಟೆ ಸತಾಯಿಸಿದನಲ್ಲಾ" ಎಂದು ಗೊಣಗಿದರು. ಚಪ್ಪಾಳೆ ತಟ್ಟಿ


ದರು. ಸೀಟಿ ಊದಿದರು-ರೈಲು ನಿಲ್ಲಲೇ ಇಲ್ಲ. ಕಡೆಗೆ ಸಭಿಕರೊಬ್ಬರು ಎದ್ದು ಕೈಮುಗಿದು "ಸಾಕುಮಾಡಯ್ಯಾ ಜನ್ಮ" ಎಂದು ಹೇಳಿಬಿಟ್ಟರು. ಉಪಕಾರ್ಯದರ್ಶಿ ವಂದನಾರ್ಪಣೆ ಮಾಡಿ ಹಾರಾ ಹಾಕೇ ಬಿಟ್ಟ. ಕಡೆಗೊಬ್ಬ ಗೊಣಗಿದ "ಇನ್ನು ಮೇಲೆ ಭಾಷಣಕ್ಕೆ ಮೊದಲು ಪ್ರಸಾದ ಹಂಚಬೇಕು" ಎಂದು. ಅಧ್ಯಕ್ಷರು ಹಾಕಿದ ಹಾರದ ಜೊತೆಗೇ ಕಾರಲ್ಲಿ ಕೂತರು—ಬಂದ ಮಂದಿ ಕಾರು ತಳ್ಳಿ ಬೀದಿ ತನಕ ಅಟ್ಟಿ ಬಂದರು. ಏಕೆಂದರೆ ಅದು ಸ್ಟಾರ್ಟ್ ಆಗುತ್ತಿರಲಿಲ್ಲ ತಳ್ಳುವವರೆಗೂ.

"ಕೊಡುವ ಒಂದೊಂದು ಲಾಡು ಉಂಡೆ ಪ್ರಸಾದಕ್ಕೆ ನಾಲ್ಕು ಘಂಟೆ ಕಠಿಣ ಸಜ" ಎಂದು ಬಂದ ಮಂದಿ ಅಂದು ಹೋದರು.

— ಯಜ್ಞಪಶು.



ಅದಕ್ಕೇ ಅಂದ್ರೆ ನಾನು ಹೇಳಿದ್ದು, ಅಷ್ಟು ದೊಡ್ಡ ಪೆಟ್ಟಿಗೆ ಮಾಡಿಸ್ಬೇಡಿ ಬಿಕೋ ಅನ್ನುತ್ತೆ ಅಂತ.



ಲೇ! ಆ ಸೂರ್ಯನಮಸ್ಕಾರದ ಪುಸ್ತಕ ತಾರೇ, ಸೊಂಟ ಹಿಡಿದುಕೊಂಡರೆ
ಏನುಮಾಡಬೇಕ್ಕಂತೆ ಓದೇ!

★ ಪಂಚಾಯ್ತಿ ಕಲಹ ★

ನಮ್ಮೂರಿನ ಪಂಚಾಯ್ತಿಯ 'ಚೇರ್‌ಮನ್' ರಾಮಯ್ಯನು ಬಹಳ ದಿನಗಳಿಂದ ಆ 'ಹುದ್ದೆ'ಯನ್ನು ಉಳಿಸಿಕೊಂಡು ಬಂದಿದ್ದಾನೆ. ಇತರರಿಗೆ ಬಿಟ್ಟುಕೊಡಲು ಅವನಿಗೆ ಸ್ವಲ್ಪವೂ ಇಷ್ಟವಿಲ್ಲ. ಆದರೆ ಬಾಯಿ ಬಿಟ್ಟು ಹಾಗೆ ಹೇಳಲಾರ. ಈಚಿಗೆ ಕೆಲವರು ಹುಡುಗರು ಮುಂದೆ ಬಂದು 'ನಾನು ಮಾಡುತ್ತೇನೆ, ತಾನು ಮಾಡುತ್ತೇನೆ' ಎಂದು ಓಡಾಡಿದರು. ಅವರ ಪೈಕಿ ಕಳೆದ ವರ್ಷ ಮೈಸೂರಿಗೆ ಮಾದರಿ ರೈತನಾಗಿ ಹೋಗಿ ಬಂದಿದ್ದ ಹನುಮಯ್ಯ ತಾನೇಕೆ ಛೇರ್‌ಮನ್ನನಾಗಬಾರದು ಎಂದು ಬಹಿರಂಗವಾಗೇ ಎಲ್ಲರನ್ನು ಕೇಳುತ್ತಿದ್ದನು. ಗ್ರಾಮದಲ್ಲಿ ಹಲವರು ರಾಮಯ್ಯನ ಕಡೆಗೂ ಮತ್ತೆ ಕೆಲವರು ಹನುಮಯ್ಯನ ಕಡೆಗೂ ತಾಳ ಹಾಕುತ್ತಿದ್ದರು. ಗುಟ್ಟಾಗಿ, ಪ್ರಚಾರ ಅಪಪ್ರಚಾರಗಳನ್ನು ನಡೆಸಿದ್ದರು. ಬಹಿರಂಗವಾಗಿ ಒಬ್ಬರ ಮೇಲೆ ಮತ್ತೊಬ್ಬರು ಊರಿನ 'ಹಿರಿಮೆ'ಗಳಿಸುವ ಪೈಪೋಟಿ ಜೋರಾಗಿಯೇ ನಡೆಯುತ್ತಿತ್ತು.

ಇದೇ ಸಂದರ್ಭ ಉಪಯೋಗಿಸಿಕೊಂಡು ಹನುಮಯ್ಯ ರಾಮಯ್ಯನ ನಡವಳಿಕೆಗಳನ್ನೆಲ್ಲಾ ಬೀದಿಗೆಳೆದ. ಪಂಚಾಯ್ತಿ ನೌಕರರನ್ನು ತನ್ನ ಹೊಲ ಉಳಲು ಕಳಿಸಿರುವುದೂ, ಪಂಚಾಯ್ತಿಗೆ ಸೇರಿದ ಗುದ್ದಲಿ ಹಾರೆ ಸಾಮಾನುಗಳೆಲ್ಲಾ ರಾಮಯ್ಯನ ಮನೆಯಲ್ಲಿಯೇ ಇರುವುದೂ, ಊರೆಲ್ಲರ ಬಾಯಲ್ಲಿ ಬರುವಂತೆ ಪ್ರಚಾರವಾಯ್ತು. ಇದೆಲ್ಲಕ್ಕಿಂತಲೂ ಹೆಚ್ಚು ಕೋಲಾಹಲಕ್ಕೆ ಕಾರಣವಾದ ವಿಚಾರವೆಂದರೆ ಪಂಚಾಯ್ತಿ ಹಾಲಿಗಾಗಿ ತಂದಿದ್ದ ಟೇಬಲ್ ಕ್ಲಾತ್ ಬಟ್ಟೆಯಲ್ಲಿ ರಾಮಯ್ಯ ಕೋಟು ಹೊಲಸಿಕೊಂಡ ಸಮಾಚಾರ. ಹನುಮ ಈ ವಿಚಾರ ತೆಗೆದುಕೊಂಡು ರಾಮಯ್ಯ ಬೀದಿಯಲ್ಲಿ ಹೋಗುವಾಗಲೆಲ್ಲಾ ಜನಕ್ಕೆ ತೋರಿಸುತ್ತಿದ್ದ "ಇದೇ ನೋಡು ಆ ಟೇಬಲ್ ಕ್ಲಾತ್‌ನಲ್ಲಿ ಹೊಲಿಸಿದ ಕೋಟು" ಎಂದು. ಈ ಸಮಾಚಾರ ಊರಲ್ಲೆಲ್ಲಾ ಗೇಲಿಯ ಮಾತಾಗಿ ಹೋಗಿತ್ತು. ಸ್ಕೂಲಿನ ಹುಡುಗರು—ಪೋಲಿಗಳು ಕೆಲವರು ರಾಮಯ್ಯ ದಾರಿಯಲ್ಲಿ ಹೋಗುತ್ತಿದ್ದಾಗ ಆತನ ಹಿಂದಿನಿಂದ ಹೋಗಿ ಪೆನ್ನಿನಿಂದ ಶಾಯಿಯನ್ನು ಅವನ ಕೋಟಿನ ಮೇಲೆ ಚುಮುಕಿಸಿ ದೂರಕ್ಕೆ ಓಡಿಹೋಗಿ "ಇದೇ ಅಲ್ಲವೇ ಟೇಬಲ್ ಕ್ಲಾತು. ಶಾಯಿನ ಗುರುತು ಕೂಡಾ ಇದೆ" ಎಂದು ದಬಾಯಿಸುತ್ತಿದ್ದರು. ಇದೆಲ್ಲಾ ತಡೆಯಲಾರದೆ ರಾಮಯ್ಯ ಹನುಮನ ಮೇಲೆ ಹಾರಾಡುತ್ತಿದ್ದನು. "ಹುಡುಗ ಮುಂಡೇದು ಇನ್ನೂ

ಕಣ್ಣು ಬಿಡಾಕೆ ಗತಿಯಿಲ್ಲ. ಏನು ತಿಳಿಯುತ್ತೆ ಆತನಿಗೆ" ಎಂದು ದಬಾಯಿಸು ತ್ತಿದ್ದ. ಹನುಮಯ್ಯನಾದರೋ ರಾಮಯ್ಯನನ್ನು ಏನಾದರೂ ಮಾಡಿ ಚೇರ್ ಮನ್ ಗಿರಿಯಿಂದ ಉರುಳಿಸಬೇಕೆಂದು ಪಣತೊಟ್ಟ. "ನನಗೇನು 'ಆಹಾ' ಗೊತ್ತಿಲ್ಲ ಅಂತ ತಿಳಿದಿದಾನೆ ಈ ರಾಮು. ನೋಡಿಕೋತೀನಿ ಇವನ್ನ ಇಳಿಸದಿದ್ದರೆ ನಾ ಹನುಮನೇ ಅಲ್ಲ. ಊರ ಮುಂದಲ ಹನುಮ ದೇವರ ಆಣೆ" ಎಂದು. ಶಪಥ ಮಾಡಿಯೇ ಬಿಟ್ಟ. ಅನಂತರ ನಾಲ್ಕೈದು ಜನ ಪಂಚಾಯ್ತಿ 'ನಂಬರು' ಗಳನ್ನು ಹಿಡಿದು 'ರುಜು' ಹಾಕಿಸಿ 'ಚೇರ್ ಮನ್' ಕೈಯಲ್ಲಿ ಅವಿಶ್ವಾಸ ಪತ್ರ ಕೊಟ್ಟ. ಅದರಲ್ಲಿ 'ನೀನು ರಾಜೀನಾಮೆ ಕೊಡು ಇಲ್ಲದಿದ್ದರೆ ಠರಾವು ಮಾಡಿ ಕಿತ್ತು ಹಾಕುತ್ತೇವೆ' ಎಂದು ತಿಳಿಸಿದ್ದರು.

ರಾಮಯ್ಯ ಇದಕ್ಕೆಲ್ಲಾ ಜಗ್ಗಿಯಾನೇ. ಹಳೆಯ ಹುಲಿ. 'ನೋಡೋಣ' ಎಂದು ಕಾಗದ ಜೇಬಿಗೆ ತುರುಕಿ ಏನೂ ತಿಳಿಯದವನಂತೆ ಓಡಿಯಾಡುತ್ತಿದ್ದ. ಇದನ್ನು ಕಂಡು ಹನುಮಯ್ಯ ಆಂಜನೇಯನಂತಾದ! ರಾಮಯ್ಯನ ಎದುರಿಗೆ ಹೋಗಿ 'ತಡಮಾಡುತ್ತಿದೀಯ. ಬೇಗ ಮೀಟಿಂಗು ಕರೆ' ಎಂದು ವರಾತ್ ಮಾಡಿದ. "ತಡಿಯೋ ಯಾಕೆ ಹೀಗಾಡ್ತೀಯ" ಎಂದು ತಲೆ ಮರೆಸಿಕೊಂಡ ರಾಮಯ್ಯ.

ಹನುಮಯ್ಯ ಅಷ್ಟಕ್ಕೆ ಬಿಡುವವನಲ್ಲ. 'ಡೀಸೀ'ಗೂ ಅಮಲ್‌ದಾರ್‌ಗೂ ಕಾಗದ ಬರೆದು ಹಾಕಿದ. ಅದರಲ್ಲಿ ಟೇಬಲ್ ಕ್ಲಾತಿನ ಸಮಾಚಾರ ಬರೆಯದೆ ಬಿಟ್ಟಿರಲಿಲ್ಲ.

ಅತ್ತ ರಾಮಯ್ಯ ಏನೇನೋ ಸಂದರ್ಭ ಹೇಳಿಕೊಂಡು ಅಮಲ್‌ದಾರರನ್ನು 'ಡೀಸೀ' ಯನ್ನು ಗ್ರಾಮಕ್ಕೆ ಕರೆಸಿ, ಅವರಿಗೆ ಚೊಕ್ಕ ಭೋಜನ ಏರ್ಪಡಿಸಿ, ಹಾರಾ ತುರಾಯಿ ಅವರ ಕೊರಳಿಗೆ ಹಾಕಿ 'ಸೀಸೀ' ಬೇರೆ ಮಾಡಿದ್ದ. ಅವರುಗಳ ಕೈಲಿ ಶಹಭಾಸ್‌ಗಿರಿ ಹೇಳಿಸಿಕೊಂಡಿದ್ದ. ಆದರಿಂದ ಊರಿನ ಮುಂದಾಳುತನದ ಹಾದಿಯಲ್ಲಿ ಒಂದು ಹೆಜ್ಜೆ ಮುಂದೆ ಇಟ್ಟಿದ್ದ.

ಗ್ರಾಮದ ಹಿರಿಯರು ಇದನ್ನೆಲ್ಲಾ ನೋಡಿ 'ಯಾಕೆ ಹೀಗೆ ಕಚ್ಚಾಡುತೀರ್ರೊ. ಯಾರಿದ್ದರೇನು. ಚೆನ್ನಾಗಿ ಕೆಲಸಮಾಡಿ' ಎಂತ ಹೇಳಿದರು. ಆದರೆ ಅವರ ಕೂಗು ಯಾರಿಗೆ ಕೇಳಬೇಕು.

ಹನುಮಯ್ಯ ಇದಕ್ಕೆಲ್ಲಾ ಜಗ್ಗಲಿಲ್ಲ. "ಪಂಚಾಯ್ತಿ ಮೀಟಿಂಗು ಕರೆ. ಅಲ್ಲೇ ತೀರ್ಮಾನ ಮಾಡೋಣ" ಎಂದು ಹಠವನ್ನೇ ಹಿಡಿದ. ಹನ್ನೆರಡು 'ನಂಬರು' ಗಳಲ್ಲಿ ಏಳು ಜನ ಹನುಮಯ್ಯನ ಬೆಂಬಲಿಗಳು. 'ಠರಾವಿಗೆ'

ರುಜು ಹಾಕಿದ್ದವರು. ಹನುಮಯ್ಯನ ಬಲಗೈ ಆದ ಸಿದ್ದರಾಮಯ್ಯ 'ಅದೇನಾದೀತ್ಲಾ—ನೋಡೇಬಿಡಾನಿ' ಎಂದು ಸೆಡ್ಡು ಹೊಡೆದು ನಿಂತೇ ನಿಂತ.

ಕಡೆಗೂ ಮೀಟಿಂಗ್ ಸೇರಿಸಬೇಕಾಯ್ತು. ಸೇಕ್‌ದಾರ್ ಶಾಮರಾಯರ ಅಧ್ಯಕ್ಷತೆಯಲ್ಲಿ ಠರಾವು ಮಂಡಿಸಲ್ಪಟ್ಟಿತು. ಜಯಸಿದ್ಧರೆಂದು ತಿಳಿದಿದ್ದ ಹನುಮಯ್ಯನ ಕಡೆಯವರು ತಾಲ್ಲೂಕಿನಿಂದ ಹೂವಿನ ಹಾರ ಕೂಡಾ ತರಿಸಿದ್ದರು. ಊರಿನ ಅರ್ಧ ಜನ ಪಂಚಾಯ್ತಿ ಆಫೀಸಿನ ಹತ್ತಿರ ನೆರೆದಿದ್ದರು. ಏನು ತಮಾಷೆ ನಡೆಯುತ್ತೆ ನೋಡೋಣ ಎಂದು.

ಓಟು ಆಗೋಕೆ ಮುಂಚೆ ಹನುಮಯ್ಯ ಹೊರಗೆ ಬಂದು 'ಏಳು—ಐದು' ಬರೆದಿಟ್ಕೊಳ್ಳಿ ಎಂದು ಹೇಳಿ ಮೀಸೆ ತಿರುವಿ ಒಳಕ್ಕೆ ಹೋದ.

ಓಟು ಒಳಗೆ ನಡೆಯಿತು. ಗಲಾಟೆ ಇಲ್ಲದೆ ನಡೆಯಿತು. ಪಂಚಾಯ್ತಿ ಹಾಲ್‌ನಿಂದ ಮೊದಲು ಹೊರಗೆ ಬಂದವನೆಂದರೆ ರಾಮಯ್ಯನೇ. ಹೊರಗೆ ನಿಂತಿದ್ದ ಜನರ ಹತ್ತಿರ ಬಂದು 'ಏಳು—ಐದು' ಎಂದ. ಜನರಿಗೆ ಅರ್ಥವಾಗಲೇ ಇಲ್ಲ. ಸ್ವಲ್ಪ ಹೊತ್ತಿನ ಮುಂದೆ ಹನುಮಯ್ಯನೂ ಇದೇ ಹೇಳಿದ್ದ. ಆದ್ದರಿಂದ ಹನುಮನೇ ಗೆದ್ದಿರಬೇಕು ಎಂದು ತರ್ಕಮಾಡಿದ ಬುದ್ಧಿವಂತನೊಬ್ಬ "ಹನುಮಯ್ಯಾ ಕಿ" ಎಂದು ಕೂಗಿದ. ಜನ ಜಂಗುಳಿ ಯಥಾಪ್ರಕಾರ 'ಜೈ' ಎಂದಿತು.

ರಾಮಯ್ಯನಿಗೆ ಸಿಟ್ಟು ನೆತ್ತಿಗೇರಿತು. 'ಲೋ ಗಮಾರ‍್ರಾ. ನನಗೆ ಕಣ್ರಲೆ, ಏಳು. ಆತನು ಹಾರಾಡ್ತಾ ಇದ್ನಲ್ಲ. ಏನು ಕಡ್ದ? ಧಡ್ಡ. ಕೀಲು ಎಲ್ಲಿದೆ ಅಂತ ಆತನಿಗೆ ಹ್ಯಾಗೆ ತಿಳೀಬೇಕು. ನೋಡಿದ್ರಾ" ಎಂದು ಮೀಸೆ ಹುರಿಮಾಡಿದ. ಜನಕ್ಕೆ ಆಗ ಗೊತ್ತಾಯ್ತು. ಕೂಡಲೇ ರಾಮಯ್ಯಾ ಕಿ ಜೈ' ಎಂದು ಪುನಃ ಘೋಷಿಸಿದರು. ಹನುಮಯ್ಯನ ಕಡೆಯವರು ತಂದಿದ್ದ ಹಾರವನ್ನು ಕಿತ್ತುಕೊಂಡು ರಾಮಯ್ಯನ ಕೊರಳಿಗೆ ಹಾಕಿದರು.

ಹನುಮ ಎಂಟು ದಿನ ಬೀದಿಗೆ ತಲೆ ಹಾಕಲಿಲ್ಲ. ಹನುಮನ ಕಡೆಗೆ ರುಜು ಹಾಕಿದ್ದವರ ಪೈಕಿ ಸಿದ್ದಪ್ಪ, ಚಂದ್ರಪ್ಪ ಇವರು ತಾಲ್ಲೂಕಿಗೆ ಹೋಗಿ ನಾಲ್ಕು ದಿನ ಸಿನಿಮಾ ನೋಡಿಕೊಂಡು—ಹೊಸಬಟ್ಟೆ ಹೊಲಿಸಿಕೊಂಡು ಬಂದದ್ದು ನೋಡಿ ಜನ ಮೂಗಿನಮೇಲೆ ಬೆರಳಿಟ್ಕೊಂಡರು.

— ಹಾ. ರಾಮಸ್ವಾಮಿ.

—o—

ನಗರ ವಾರ್ತೆ

[೧೯೭೧ರ ಏಪ್ರಿಲ್ ೭ನೆ ತಾ|| ಪ್ರಕಟವಾದ ಕನ್ನಡ ಪತ್ರಿಕೆಯೊಂದರ ನಾಲ್ಕನೆಯ ಪುಟದಿಂದ]

ಶುಕ್ರವಾರ : ಮಹಿಳಾ ಸಮಾಜದಲ್ಲಿ ಪಂಡಿತರತ್ನಂ ಸೋಮಕ್ಕನವರ ಉಪನ್ಯಾಸ : "ವೈಕುಂಠದಲ್ಲಿ ಅತ್ತೆ ಸೊಸೆ ವ್ಯಾಜ್ಯಗಳು" ಸದಸ್ಯೆಯರಿಗೆಮಾತ್ರ. ಉಪನ್ಯಾಸಾನಂತರ, ಭಾಷಣಕಾರರು ಹಲವು ಪ್ರಶ್ನೆಗಳಿಗೆ ಉತ್ತರ ಕೊಡಲೊಪ್ಪಿರುವರು.

: ಗಾಂಧಿ ಎಂಬುವರು ಯಾರು?—ಚರ್ಚೆ, ಅಭಿನವ ಸರ್ವೋದಯ ಸಮಾಜ.

: ಪ್ರಾಕ್ತನ ವಿಮರ್ಶಾ ಸಂಘ: ವಿದ್ವಾನ್ ಸೋಮಯಾಜಿ ಅವರು "ಮದ್ಯಪಾನ ನಿರೋಧವಿದ್ದ ಒಂದು ದಶಕ" ಎಂಬ ಪ್ರಬಂಧವನ್ನು ಓದುವರು.

ಶನಿವಾರ : "ಐವತ್ತು ವರ್ಷಗಳ ಹಿಂದಿನ ಸುವರ್ಣ ಯುಗ"—ವಾಕ್ಚಿತ್ರ ಪ್ರದರ್ಶನ. ಐವತ್ತು ವರ್ಷಗಳ ಹಿಂದೆ ನಮ್ಮ ಹಿರಿಯರು ರೂಪಾಯಿಗೆ ಎರಡು ಸೇರು, ಒಂದೂ ಮುಕ್ಕಾಲು ಸೇರು ಅಕ್ಕಿಯನ್ನು ಕೊಂಡು ಸುಖದಲ್ಲಿ ಓಲಾಡಿದರು, ಎಂದು ಚಿತ್ರಿಸಿ, ನಮ್ಮ ಈಗಿನ ಅಪಾರ ಅಧೋಗತಿಗೆ ಕಾರಣಗಳೇನು ಎಂದು ಸಂಶೋಧನೆ ನಡೆಸಲು ನಮ್ಮನ್ನು ಪ್ರೇರೇಪಿಸುವ ಚಿತ್ರ.

: ಗ್ರಂಥ ಪ್ರಕಟಣೆ ಮಹೋತ್ಸವ: ಕನ್ನಡ ಸಾಹಿತ್ಯದಲ್ಲಿನ ಸಾವಿರದ ಎಂಟನೆಯ ಅಶ್ಲೀಲ ಮಹಾಕಾವ್ಯದ ಪ್ರಕಟನಾ ಸಮಾರಂಭ.... ಸಾಮಾನ್ಯ ಮನುಷ್ಯ ಸೇವಕ ಶ್ರೀ ಉಂಡಾಡಿಯವರ ಸಮ್ಮುಖದಲ್ಲಿ.


ಭಾನುವಾರ: ಬೆಂಗಳೂರು ನಗರದ ವಾಹನ ಪ್ರದರ್ಶನ—ಐತಿಹಾಸಿಕ! ಪರಿಹಾಸಿಕ!....ಜಟಕ ಬಸ್ ಮುಂತಾದ ಮೂಳೆ ಮುರುಕ ಗಾಡಿಗಳು, ಇದ್ದಿಲು ಸೌದೆ ಕರಲು ಅರ್ಧ ಶತಮಾನದ ಹಿಂದೆ ಉಪಯುಕ್ತವಾಗಿದ್ದ

ಪೆರಾಂಬುಲೇಟರುಗಳು, ಸೈಕಲುಗಳು, ಆಟೋ ಮೊಬೈಲುಗಳು, ಯಂತ್ರಿಕ ಕತ್ತೆಗಳು, ಬಾಲ ತಿರುಚಿದರೆ ಮಾತ್ರ ಓಡುತ್ತಿದ್ದ ಎತ್ತಿನ ಗಾಡಿಗಳು, ಬೆನ್ನು ಬಗ್ಗಿಸಿ ತಲೆತಗ್ಗಿಸಿ ನರರನ್ನು ವಾನರರನ್ನಾಗಿ ಮಾಡುತ್ತಿದ್ದ ರೈಲು ಡಬ್ಬಿಗಳು ಕುಬೇರರುಪಯೋಗಿಸುತ್ತಿದ್ದ ರಿಕ್ಷಾಗಳು, ಎಲ್ಲವನ್ನೂ ಬಂದು ನೋಡಿರಿ.

: ತ್ಯಾಗರಾಜ ಮಹಾ ಸಂಗೀತ ಸಭೆ: ಸಿನಿಮಾ ಹಾಡುಗಳಿಗಾಗಿಯೇ ಮೀಸಲಾಗಿರಿಸಿರುವ ಗಾಯನ ಸಂಸ್ಥೆ. ದಯವಿಟ್ಟು ಸಭಿಕರು ಹಿಂದಿ ಹಾಡುಗಳನ್ನಲ್ಲದೆ ಬೇರೊಂದನ್ನೂ ಹಾಡುವಂತೆ ಗಾಯಕರನ್ನು ಒತ್ತಾಯಪಡಿಸಬಾರದೆಂದು ಕೋರಿದೆ. ಆಸ್ಥಾನ ಮಹಾ ಗಾಯಕ ವಿದ್ವಾನ್ ಕರಡಿಯವರ ಚಿತ್ರಗಾನ.

: ಬಿ. ಎ. ಬಿ. ಎಸ್. ಸಿ. ಡಿಗ್ರಿ ಪರೀಕ್ಷೆಗಳಿಗೆ ಕೂಡುವ ವಿದ್ಯಾರ್ಥಿಗಳಿಗಾಗಿ ವಿಶೇಷ ಉಪನ್ಯಾಸಗಳು: (೧) ಸಿನಿಮ ತಾರೆಯರ ಅಂತರಂಗ ಜೀವನ: ಪ್ರೊ. ಪುಷ್ಪಬಾಣ್‌ರವರಿಂದ.

—— o ——



ಲೋ ಮಾಣಿ! ಮೊದಲು ಕ್ಲಾರ್ಕುಗಳಿಗೆ ಕಾಫಿಕೊಡು—ಅವರು ಐದು ವರ್ಷದ ಪ್ಲಾನ್ ಮಾಡ್ತಾ ಇಧಾರೆ—ಆಮೇಲೆ ಆಫೀಸರಿಗೆ ಕೊಡು.

★ ಹಿರಿಯರ ಹಿರಿಮೆ ★

ಯಂತ್ರಗಳಿಂದಾಗುವ ಅನಾಹುತಗಳನ್ನೂ, ಅವುಗಳ ರಾಕ್ಷಸೀ ಬೆಳವಣಿಗೆಯನ್ನು ತಡೆಗಟ್ಟುವ ಅವಶ್ಯಕತೆಯನ್ನೂ, ಅವುಗಳಿಂದ ಮಾನವನ ಮಾನವತ್ವ ಅಳಿಸಿ ಹೋಗುವ ಪ್ರಮೇಯವನ್ನೂ, ನಮ್ಮ ಹಿರಿಯರು ಬಹಳ ಪುರಾತನ ಕಾಲದಿಂದಲೂ ಅರಿತಿದ್ದರೆಂಬುದಕ್ಕೆ ಈಚೆಗೆ ಹಲವಾರು ನಿದರ್ಶನಗಳು ಸಿಕ್ಕಿವೆ.

ಎಳ್ಳು ಕಡಲೆ ಬೀಜ ಹರಳು ತೆಂಗಿನಕಾಯಿ ಮುಂತಾದ ವಸ್ತುಗಳಿಂದ ನೆಯ್ಯನ್ನು (ಎಳ್ಳು-ನೆಯ್=ಎಣ್ಣ್ಯ=ಎಣ್ಣೆ) ತೆಗೆಯಲು ಗಾಣ ಎಂಬ ಹೊಸ ಯಂತ್ರವನ್ನು ಯಾರೋ ಒಬ್ಬ ವಿಜ್ಞಾನ ಪಂಡಿತ ಕಂಡು ಹಿಡಿದು ಅದರ ಅನುಕೂಲಗಳನ್ನು ವಿವರಿಸಿ ಪ್ರಚಾರ ಮಾಡಿದಾಗ, ನೂರಾರು ಸನಾತನಿಗಳು ಸಭೆ, ಭಾಷಣ, ಮೆರವಣಿಗೆ, ಹರತಾಳ, ಕಲ್ಲುಬೀರಾಟ, ಖಂಡನಾ ಸಾಹಿತ್ಯ, ನಿಯೋಗ ಗೋಷ್ಠಿ ಇತ್ಯಾದಿ ಉಪಾಯಗಳಿಂದ ಗಾಣದೂಷಣ ಕಾರ್ಯವನ್ನು ನಡೆಯಿಸಿದರೆಂದು ಗೊತ್ತಾಗಿದೆ. "ಲಭೇತ ಸಿಕತಾಸು ತೈಲಮಪಿ ಯತ್ನತಃ ಪೀಡಯೇತ್"—ಮರಳನ್ನೂ ಕೂಡ ಬಲವಾಗಿ ಹಿಂಡಿದರೆ ತೈಲ ಸಿಗುತ್ತದೆ ಎಂದು ಶಾಸ್ತ್ರ ಘೋಷಿಸುತ್ತಿರುವಾಗ ಮುಷ್ಟಿ ಬಲವನ್ನು ಕುಗ್ಗಿಸುವ ಗಾಣಗಳಿಗೆ ಧಿಕ್ಕಾರವಿರಲಿ—ಎಂದು ಆಗ ಕೂಗಿದರಂತೆ. ಊಟಕ್ಕಾಗಿ ಎಲೆ ಮುಂದೆ ಕೂಡುವಾಗ, ಒಂದು ಸೇರು ಎಳ್ಳನ್ನು ಪಕ್ಕದಲ್ಲಿರಿಸಿಕೊಂಡು, ಅದನ್ನು ಕೈಯಿಂದಲೇ ಹಿಂಡಿ ನಮ್ಮ ತಾತಂದಿರು ಎಣ್ಣೆ ಬೆರೆಸಿ ಉಣ್ಣುತ್ತಿದ್ದರು, ಎಂದು ಉದ್ಘೋಷಿಸಿದರಂತೆ. ಗಾಣದಿಂದ ತೆಗೆದ ಎಣ್ಣೆಗೆ ಆ ರುಚಿಯಾಗಲಿ, ಆ ಶುಚಿಯಾಗಲಿ, ಆ ಜೀವಸತ್ವವಾಗಲಿ, ಆ ದೈವೀಸಂಪತ್ತಾಗಲಿ ಎಂದೂ ಬರುವುದಿಲ್ಲವೆಂದೂ, ಮೂಗ ಪ್ರಾಣಿಗಳ ಹಿಂಸೆಯಿಂದಲೂ, ಒಣ ಮರಗಳ ಒತ್ತಾಯದಿಂದಲೂ ತಯಾರಾದ ಎಣ್ಣೆ ದೇವರ ನೈವೇದ್ಯಾದಿಗಳಿಗೆ ಅನುಪಯುಕ್ತವೆಂದೂ ಅವರು ಟೀಕಿಸಿದರಂತೆ.

ಹಾಗೆಯೇ, ನಮ್ಮ ಪ್ರಾಚೀನ ಸನಾತನಿಗಳು ಖಂಡಿಸಿದ ಮತ್ತೊಂದು ಯಂತ್ರ—ಹಲ್ಲಿಲ್ಲದ ಮುದುಕರು ಎಲೆ ಅಡಿಕೆ ಕುಟ್ಟಲು ಅಳವಡಿಸಿಕೊಂಡ ಕಬ್ಬಿಣದ ಒರಳು! ಆಗಿನ ಸಾಹಿತ್ಯವನ್ನೋದಿದರೆ, ಈ ಒರಳನ್ನು ನಮ್ಮ ಹಿರಿಯರು ಹೇಗೆ ಹೇಗೆ ಟೀಕಿಸಿದರು, ಎಂಬುದು ಗೊತ್ತಾಗುತ್ತದೆ. ವಾನಪ್ರಸ್ಥಕ್ಕೆ ವಿರೋಧ, ಮುದುಕರು ಎಲೆ ಅಡಿಕೆಯನ್ನಗೆಯಬಾರದೆಂಬುದಕ್ಕಾ

ಗಿಯೇ ಜಗದೀಶ್ವರನು ಅವರ ಹಲ್ಲುಗಳನ್ನೆಲ್ಲ ಉದುರಿಸುತ್ತಾನೆ, ಅಂದಮೇಲೆ, ಅವರು ಯಂತ್ರೋಪಕರಣಗಳ ನೆರವಿಂದ ತಾಂಬೂಲ ತಿಂಬುವುದು ಮಹಾ ಪಾತಕ, ದೇವದ್ರೋಹ, ನರಕಪ್ರಾಪ್ತಿ ಹಲ್ಲಿಲ್ಲದ ಹಸುಳೆಗಳೂ, ವೃದ್ಧ ವೃದ್ಧೆಯರೂ ವೀಳ್ಯದೆಲೆಯನ್ನೂ ಅಡಿಕೆಯನ್ನೂ ಸುಣ್ಣವನ್ನೂ ಸೇರಿಸಿ, ಮೆಲ್ಲಲುಪಕ್ರಮಿಸಿದರೆ ಅವುಗಳ ಬೆಲೆ ಏರಿ, ಅಭಾವ ತಲೆದೋರಿ, ನ್ಯಾಯವಾಗಿ ಅವುಗಳನ್ನು ಪಯೋಗಿಸುವ ಹಕ್ಕನ್ನು ಪಡೆದಿರುವ ತರುಣ ತರುಣಿಯರ ಬಾಯಿಂದ ಕಸಿದುಕೊಂಡ ಹಾಗಲ್ಲವೆ—ಇವೇ ಮೊದಲಾದ ವಾದಗಳು ಬಹಳ ಬಹಳ.

ಹೀಗೆಯೇ, ಬೀಸಣಿಗೆಗಳ ಬಹಿಷ್ಕಾರವನ್ನೂ ನಮ್ಮ ಪ್ರಾಚೀನರು ನಡೆಸಿದರು. ಊದಿ ಬೆಳಗಿಸು, ನಿನ್ನ ಉಸಿರಿಂದ ಅಗ್ನಿಯನ್ನು ಪ್ರಜ್ವಲಿಸು, ಪ್ರಾಣಾದಗ್ನಿಶ್ಚ ವಾಯುಶ್ಚ ಎಂದು ಶ್ರುತಿ ಸ್ಮೃತಿಗಳು ಕೂಗುತ್ತಿರುವಾಗ, ಒಲೆಯನ್ನುರಿಸಲು ಬೀಸಣಿಗೆಗಳನ್ನುಪಯೋಗಿಸಬಹುದೆ, ವಾಯುದೇವರ ಸಂಚಾರವನ್ನು ತೀವ್ರಗೊಳಿಸಿ, ತಿರುಗಿಸಿ, ಬೆಂಕಿಯಕಡೆ ಆವರನ್ನೋಡಿಸಿ, ಕೇವಲ ನಮ್ಮ ಹೊಟ್ಟೆಪಾಡಿಗಾಗಿ ಅವರಿಂದ ಕೈಂಕರ್ಯಮಾಡಿಸಿಕೊಳ್ಳುವ ಮಾನವ ದಾನವನಲ್ಲವೆ, ಎಂದೆಲ್ಲ ಪಂಡಿತರು ಸಮ್ಮೇಳನಗಳಲ್ಲಿ ಅಧ್ಯಕ್ಷ ಭಾಷಣೆಮಾಡಿದಾರೆ. ನಮ್ಮ ಹಿಂದಿನವರೇನೂ ಮುಟ್ಠಾಳರಲ್ಲ; ಅವರೂ ಯಂತ್ರಪ್ರೇಮಿಗಳಲ್ಲ; ಯಂತ್ರಗಳಿಗೆ ಸ್ವಲ್ಪ ಅವಕಾಶವನ್ನು ಕೊಟ್ಟರೆ ಸಾಕು, ಅವು ವಿಷವೃಕ್ಷಗಳಂತೆ ಹರಡಿ ನಾಗರಿಕತೆಯನ್ನೇ ಹಾಳುಮಾಡುವುವು ಎಂಬುದನ್ನು ಅವರು ಬಲ್ಲವರಾಗಿದ್ದರು. ಬೀಸಣಿಗೆ ಗಾಳಿಯಿಂದ ಉರಿದ ಬೆಂಕಿಯಿಂದಾದ ಅನ್ನದ ರುಚಿ, ಊದಿ ಉರಿಸಿದ ಬೆಂಕಿಯಲ್ಲಿ ಬೆಂದ ಅನ್ನಕಿಂತ ಕಡಮೆ, ಎಂಬದನ್ನೂ ಅವರು ಕಂಡುಹಿಡಿದು, ಬರೆದಿಟ್ಟಿದಾರೆ.

ಹೀಗೆಯೇ, ಮೊಸರಿಂದ ಬೆಣ್ಣೆಕಡೆಯಲು ದೇವರು ಕೊಟ್ಟ ಐದು ಬೆರಳೇ ಉತ್ತಮ, ಕಡೆಗೋಲು ಖಂಡನೀಯ; ಹಾಗೆ ತೆಗೆದ ನವನೀತ ನವನೀತವೇ ಅಲ್ಲ, ಪುರಾಣನೀತ ಎಂದಲ್ಲಿ ಒಂದು ಗ್ರಂಥದಲ್ಲಿ ಬರೆದಿದೆ; "ಸೂಜೀ ಸೋಜಿಗ ಶತಕ"ದಲ್ಲಿ ಹೊಲಿದ ಬಟ್ಟೆ ಹೊಲಸು. ಅದರಿಂದ ಆರೋಗ್ಯಕ್ಕೆ ಹಾನಿ, ಮಾಂಸ ಖಂಡಗಳ ಬೆಳವಣಿಗೆಗೆ ಭಂಗ ಎಂದೊಬ್ಬರು ವಾದಿಸಿದಾರೆ; ಕಂದಮೂಲವೇ ಬೆಂದ ಮೂಲಕ್ಕಿಂತ ಉತ್ತಮ; ಕಬ್ಬನ್ನು ಕಚ್ಚಿ ಅಗೆದು ರಸ ಕುಡಿಯಬೇಕೇ ವಿನಹ ಬೆಲ್ಲಕ್ಕೆ ಬಹಿಷ್ಕಾರ ಹಾಕಿ ಎಂದೊಬ್ಬರು ಶಾಸ್ತ್ರಿಗಳು ವಾರಾಣಾಸಿಯಲ್ಲಿ ಪ್ರಚಾರ ಮಾಡಿದರು........ಅಂತು ಈಗಿನ ಹಲವರ ಯಂತ್ರದ್ವೇಷಕ್ಕೆ ನಮ್ಮ ಹಿಂದಿನ ಇತಿಹಾಸದಲ್ಲೂ ಅನೇಕ ಉದಾಹರಣೆಗಳಿವೆ.

———o———

ಭಾಷಣಕಾರರ ಸಮ್ಮೇಳನ

ಪ್ರಾಂತೀಯ ಭಾಷಣಕಾರರ ಸಮ್ಮೇಳನವು ಮೊನ್ನೆ ವಿಜಯ ನಗರದಲ್ಲಿ ಅತಿ ವಿಜೃಂಭಣೆಯಿಂದ ನಡೆಯಿತು. ಯಾವುದೂ 'ಖಾತೆ' ಇಲ್ಲದ ಮಂತ್ರಿಗಳು ಅಧ್ಯಕ್ಷತೆ ವಹಿಸಿದರು. ದೇಶದ ನಾನಾ ಭಾಗಗಳಿಂದ ಪ್ರತಿನಿಧಿಗಳು ಆಗಮಿಸಿದ್ದರು. ಅವರ ಪೈಕಿ ಅರ್ಧಕ್ಕಿಂತ ಹೆಚ್ಚು ಜನ ಕಾಂಗ್ರೆಸಿಗರು ಉಳಿದವರಲ್ಲಿ ಕೆಲವರು ಸಾಹಿತ್ಯ ವಿಶಾರದರೂ ಮತ್ತೆ ಕೆಲವರು ನೂತನ ಪಕ್ಷಗಳ ಸದಸ್ಯರೂ ಆಗಿದ್ದರು.

"ಇತ್ತೀಚೆಗೆ ಚಿಂತಾಜನಕವಾಗುತ್ತಿರುವ ಭಾಷಣಕಾರರ ಪರಿಸ್ಥಿತಿಯನ್ನು ಪರಿಶೀಲಿಸಿ, ಒದಗಿಬಂದಿರುವ ಕಷ್ಟವನ್ನು ತಪ್ಪಿಸುವ ಮಾರ್ಗವನ್ನು ಚರ್ಚಿಸಲು ಮತ್ತು ಭಾಷಣಕಾರರ ಹಕ್ಕುಬಾಧ್ಯತೆಗಳನ್ನು ಉಳಿಸಿಕೊಳ್ಳುವ ಸಲುವಾಗಿಯೇ ಈ ಸಮ್ಮೇಳನ ಕರೆದಿದೆ". ಎಂದು ಸ್ವಾಗತ ಸಮಿತಿ ಅಧ್ಯಕ್ಷರು ಹೇಳಿದಾಗ ಅನೇಕ ಪ್ರತಿನಿಧಿಗಳು ತಾವು ಕೂತಿದ್ದ ಸ್ಥಳಗಳಿಂದಲೇ "ಹೌದು-ನಿಜ" ಎಂದು ಕೂಗಿದ್ದೂ ಅಲ್ಲದೆ ತಮ್ಮ ಸಮ್ಮತಿ ಸೂಚಕವಾದ ಪುಟ್ಟ ಭಾಷಣಗಳನ್ನೇ ಮಾಡಿದರು. ಸಭಾಧ್ಯಕ್ಷರು ರೇಗಿ—"ಇದೇ ನೋಡಿ ನಮ್ಮ ಸ್ಥಿತಿ. ಯಾವ ಸಭೆಯಲ್ಲಿ ಹೋದರೂ ನಾವು ಮಾತನಾಡುವುದಕ್ಕೆ ಬಿಡುವುದೇ ಇಲ್ಲ. ಇಲ್ಲಿ ಅದೇ ಅನುಭವ ಇರುವ ನೀವೂ ಕೂಡಾ ಹೀಗೆ ಮಾಡಿದರೆ ನಮ್ಮ ಹಕ್ಕು ರಕ್ಷಿಸಲ್ಪಡುವುದೇ?" ಎಂದು ಘರ್ಜಿಸಿದಾಗ ಸಭೆ ಶಾಂತವಾಯ್ತು.

ಸ್ವಾಗತಾಧ್ಯಕ್ಷರು ಮುಂದುವರಿಯುತ್ತಾ ಹೀಗೆ ಹೇಳಿದರು. "ಈಚೀಚೆಗೆ ಜನಗಳು ಸೋಮಾರಿಗಳಾಗುತ್ತಿದಾರೆ. ಸಾರ್ವಜನಿಕ ವಿಚಾರಗಳಲ್ಲಿ ಆಸಕ್ತ ರಹಿತರಾಗುತ್ತಿದಾರೆ. ದೇಶ ದೇಶಾಂತರಗಳಲ್ಲಿ ಗಳಿಗೆ ಗಳಿಗೆಗೆ ವ್ಯತ್ಯಾಸವಾಗುತ್ತಿರುವ ವಿಚಾರವಾಗಿ ನಾವು ಮಾತನಾಡಲು ಹೋದರೆ ಹೀಗೆ ಅವರು ಉದಾಸೀನ ಮಾಡಬಹುದೆ? ಸಭೆಗೇ ಬರುವುದಿಲ್ಲ. ವ್ಯವಸ್ಥಾಪಕರು ಕಷ್ಟಪಟ್ಟು ಗೆಳೆಯರಿಗೆ ಕೈಮುಗಿದು ಕೆಲವರಿಗೆ ಕಾಲು ಹಿಡಿದು ನಾಲ್ಕು ಜನರನ್ನು ಸೇರಿಸಲು ಪ್ರಯತ್ನಿಸುವರು. ಭಾಷಣ ಶುರುವಾದಾಗ ಅವರೂ ಏಕ ಚಿತ್ತತೆಯಿಂದ ಕೇಳುಲ್ಲ. ಮುದುಕರು ಪೇಪರನ್ನು ಓದುತ್ತಿರುವುದು, ಹುಡುಗರು 'ಚೌಕಾಬಾರ' ಆಟವನ್ನು ಅಲ್ಲಿಯೇ ಶುರು ಮಾಡುವುದು, ನಡೆಯುತ್ತೆ. ಹಾಳಾಗಿ

ಹೋಗಲಿ ನಾವು ತಿಳಿದಷ್ಟು ಹೇಳಿ ಹೋಗೋಣ ಎಂದು ಕೊಂಡಿದ್ದರೆ ಮಧ್ಯೆ ಕೆಲವು ದಾಂಡಿಗರು, "ಇದು ಹೀಗಲ್ಲವೇ—ಅದು ಹಾಗಲ್ಲವೇ" ಎಂದು ಕೇಳುವ ಪ್ರಶ್ನೆಗಳು ಬೇರೆ. ಇದೆಲ್ಲಾ ಏನು ನಡೆದರೂ ನಮಗೆ ಸಂತೋಷವೇ ಆಗುತ್ತಿತ್ತು. ಬುದ್ಧಿವಂತ ಜನರು ನನ್ನ ಭಾಷಣ ಕೇಳಿದರು ಎಂದು ಸಂತೋಷ ಪಡಬಹುದಾಗಿತ್ತು. ಆದರೆ ಈ ಅವಕಾಶ ಹತ್ತು ಸಭೆಗೆ ಒಂದೂ ಸಿಕ್ಕದೆ ಇರುವುದು ತುಂಬಾ ಶೋಚನೀಯ. ಗಿಡಮರಗಳನ್ನೋ, ಬೆಂಚು ಕುರ್ಚಿಗಳನ್ನೋ, ಕೇವಲ ಕಾರ್ಯದರ್ಶಿ ಅಥವಾ ಕಸಗುಡಿಸುವ ಜವಾನನನ್ನೋ ಉದ್ದೇಶಿಸಿ ಭಾಷಣ ಮಾಡಬೇಕಾದ ಪ್ರಸಂಗವೇ ಹೆಚ್ಚು.

ಇದೆಲ್ಲಾ ನಿಮಗೂ ಅರಿವಿದೆ. ಇನ್ನು ನಾವು ತಡೆಯಲಾಗುಲ್ಲ. ಏನಾರಾ ಮಾಡಿ ನಮ್ಮ ಹಕ್ಕುಬಾಧ್ಯಕ್ಷತೆಯನ್ನು ನಾವು ಕಾಯ್ದುಕೊಳ್ಳಬೇಕು" ಎಂದು ಹೇಳಿ ಚಪ್ಪಾಳೆಗಳ ನಡುವೆ ಸ್ಥಾನವನ್ನು ಅಲಂಕರಿಸಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಹೀಗೆ ನುಡಿದರು. "ನೀವು ಹೇಳುವುದೆಲ್ಲಾ ತಿಳಿಯಿತು, ತಿಳಿದಿತ್ತು. ನಾನು ಮಂತ್ರಿ ಆಗುವ ಮುಂಚೆಯೇ ಹೀಗೆ ಆಗುತಿತ್ತು. ಈಗ ಇನ್ನು ಸ್ವಲ್ಪ ಪರಿಸ್ಥಿತಿ ಭಿಗಡಾಯಿಸಿರಬಹುದು. ಮಂತ್ರಿಯಾಗಿದ್ದೂ ನನಗೇ ಎಷ್ಟೋಸಾರಿ ಏಟು ಬಿದ್ದಿದೆ. ಆದರೆ ಒಂದು ಭರವಸೆ ಇದೆ. ಯಾರೂ ಬರದಿದ್ದರೂ 'ಡೀಸೀ' ಅಮಲ್ದಾರರು, ರೆವಿನ್ಯೂ ಇನ್ಸ್‌ಪೆಕ್ಟರುಗಳು ಇದ್ದೇ ಇರುತ್ತಾರೆ. ಆದರೂ ಒಮ್ಮೊಮ್ಮೆ ಪರಿಸ್ಥಿತಿ ಎದುರಿಸುವುದು ಕಷ್ಟವಾಗುವುದು. ಎಷ್ಟೋ ಗ್ರಾಮಗಳಲ್ಲಿ 'ಭಿನ್ನವತ್ತಳೆ' ಕೊಡುತ್ತೇನೆಂದು ಹೇಳಿ ಕದ್ದೇ ಹೋಗುತ್ತಾರೆ. ಸರಿಯಾದ 'ಊಟ' ಹಾಕಿಸುತ್ತೇನೆಂದು ಭರವಸೆ ಕೊಟ್ಟು 'ತಿಳೀ ಸಾರು ಅನ್ನ' ಬಡಿಸಿ ಅವಮಾನ ಮಾಡುತ್ತಾರೆ. ಒಟ್ಟಿನಲ್ಲಿ ಹೇಳುವುದಾದರೆ ನಿಮ್ಮಿಂದ ಹಿಡಿದು ನನ್ನವರೆಗೆ ಎಲ್ಲರಿಗೂ ಕಷ್ಟ ಒದಗಿದೆ—ಯಾರೂ ಸಭೆಗಳಿಗೇ ಬರದಿದ್ದರೆ ನಾವು ಮತ್ತೆಲ್ಲಿ ಹೋಗಿ ಭಾಷಣಮಾಡಬೇಕು? ನಮ್ಮ ಜೀವನ ತಾನೇ ಹೇಗೆ?

ಇಂಗ್ಲೆಂಡ್ ಅಮೇರಿಕಗಳಲ್ಲಿ ಭಾಷಣಕಾರರಿಗೆ ಹಣ ಕೊಡುತ್ತಾರೆ. ಅದಕ್ಕೆ ಬದಲಾಗಿ ನಾವೇ ವ್ಯವಸ್ಥಾಪಕರಿಗೆ ಸಭಿಕರಲ್ಲಿ ಕೆಲವರಿಗೆ ಹಣಕೊಟ್ಟರೂ ಬರುವುದೇ ಇಲ್ಲ. ಕುರಿಗಳಹಾಗಿದ್ದ ಈ ಜನಕ್ಕೆ ಯಾವನೋ ಪಾಪಿ ಮಂತ್ರ ಮಾಡಿಬಿಟ್ಟಿದ್ದಾನೆ. ನೀವು ಈ ದಾರಿಯಲ್ಲಿ ಹಿಡಿದು ಹೋರಾಡಿ. ನಾನು ನಿಮಗೆ ಬೇಕಾದಷ್ಟು ಬೆಂಬಲ ಕೊಡುವೆ" ಎಂದು ಭರವಸೆ ನೀಡಿದಾಗ—ಸಭೆ ಹರ್ಷೋದ್ಗಾರದಿಂದ ತುಂಬಿ ತುಳುಕಿತು. ಆ ಆನಂದದಲ್ಲಿ ಕಾಂಗ್ರೆಸ್ ಅಧ್ಯಕ್ಷರು ಕಣ್ಣೀರಿಟ್ಟರು. ಸಾಹಿತ್ಯ ವಿಶಾರದರು ಮೈಮರೆತರು. ಉಳಿದವರು ಕುಣಿದಾಡಿದರು.

ಅನಂತರ ಈ ಕೆಳಗೆ ಕಂಡ ನಿರ್ಣಯಗಳು ಸರ್ವಾನುಮತದಿಂದ ಪಾಸಾದವು.

— ೧ —

'ಅಖಿಲ ವಿಜಯನಗರ ಭಾಷಣಕಾರರ ಸಂಘ'ವನ್ನು ಸ್ಥಾಪಿಸತಕ್ಕದ್ದು. ಇದರ ಶಾಖೆಗಳನ್ನು ಪ್ರತಿ ಜಿಲ್ಲೆಯಲ್ಲಿಯೂ ತೆರೆದು, ಆ ಶಾಖೆಯನ್ನು ನಡೆಸಲು ಒಬ್ಬೊಬ್ಬ ವ್ಯವಸ್ಥಾಪಕರನ್ನು ಸಂಬಳದಮೇಲೆ ನೇಮಿಸತಕ್ಕದ್ದು.

— ೨ —

ವ್ಯವಸ್ಥಾಪಕನು ಯಾವ ಭಾಷಣಕಾರನೇ ಬಂದರೂ ಅವನಿಂದ 'ರುಸುಂವನ್ನು' ವಸೂಲುಮಾಡಿ ಸಭೆ ಏರ್ಪಡಿಸತಕ್ಕದ್ದು. ಸದರಿ ರುಸುಮನ್ನು ಕೇಂದ್ರ ಕಛೇರಿಗೆ ವರ್ಗಾಯಿಸತಕ್ಕದ್ದು.

— ೩ —

ಸಭೆ ಏರ್ಪಡಿಸುವಾಗ ವ್ಯವಸ್ಥಾಪಕನು ಚಾಕಚಕ್ಯತೆಯಿಂದ ನಡೆದುಕೊಂಡು ಎಲ್ಲ ತರಹೆಯ—ಎಲ್ಲ ಅಭಿರುಚಿಯ ಜನರೂ ಸೇರುವಂತೆ—ಭಾಷಣದ ಜೊತೆಗೆ ಒಂದು ನರ್ತನವನ್ನೋ, ಸಿನಿಮಾ ಹಾಡುಗಾರಿಕೆಯನ್ನೋ, ಇತ್ಯಾದಿ ಜೋಡಿಸಿಯೋ ಇರಬೇಕು. ಈ ನಿರ್ಣಯವು "ಮಹಿಳಾ ಸಮಾಜದವರಿಂದಲೇ ದೇವತಾ ಪ್ರಾರ್ಥನೆ ಏರ್ಪಡಿಸಬೇಕೆಂಬ" ತಿದ್ದುಪಡಿಯೊಡನೆ ಅಂಗೀಕೃತವಾಯ್ತು.

— ೪ —

ಸಭೆಗಳಿಗೆ ಅಧ್ಯಕ್ಷ ಸ್ಥಾನ ಅಲಂಕರಿಸಲು ಕಾಲೇಜು ಹುಡುಗಿಯರನ್ನೇ ಆರಿಸುವುದು ಸೂಕ್ತವಾದದು ಎಂದು ವ್ಯವಸ್ಥಾಪಕರುಗಳಿಗೆ ತಿಳಿಸಬೇಕೆಂದು ಈ ಸಭೆ ನಿರ್ಧರಿಸುವುದು.

* * * *

ಇಷ್ಟು ನಿರ್ಣಯಗಳಾದಮೇಲೆ ಸಮ್ಮೇಳನದ ಕಾರ್ಯದರ್ಶಿಯವರಾದ ಕೃಷ್ಣರಾಯರಿಂದ ವಂದನಾರ್ಪಣೆ ನಡೆಯಿತು. ಆ ಸಂದರ್ಭದಲ್ಲಿ ಅವರು ಬಿನ್ನವಿಸಿದ್ದೇನೆಂದರೆ, ಈ ಸಭೆಗೆ ಮಂತ್ರಿಗಳು ಅಧ್ಯಕ್ಷತೆ ವಹಿಸುವುದು ಸೂಕ್ತವೂ ಸಹಜವೂ ಆಗಿದೆ ನಮಗೆ ಮಂತ್ರಿಗಳೇ ದೇವರು, ಅವರೇ ಅಭಯದಾತರು, ಅವರಿಂದಲೇ ನಮ್ಮ ಉಳಿವು ಅವರೇ ನಮಗೆ ಮಾರ್ಗದರ್ಶಕರು ಇನ್ನು ಮುಂದೂ ಅವರು ಭಾಷಣಕಾರರ ಆಗು ಹೋಗುಗಳನ್ನು ಗಮನದಲ್ಲಿಟ್ಟು ಕಡೆಯಪಕ್ಷ ಇನ್ನೆಲ್ಲೂ ಅವಕಾಶವಾಗದಿದ್ದರೂ, ತಾವು ಭಾಗವಹಿಸುವ ಸಭೆಗಳಲ್ಲಾದರೂ ಒಬ್ಬಿಬ್ಬರು ಭಾಷಣಕಾರರನ್ನು ತಮ್ಮೊಡನೆ ಕರೆದುಕೊಂಡುಹೋಗಿ

ಅವಕಾಶಕೊಡಬೇಕು. ಮಂತ್ರಿಗಳೇ ಅಪ್ಪಣೆ ಕೊಡಿಸಿದಂತೆ ಆ ಸಭೆಗಳಲ್ಲಿ ಕಡೆಯುಪಕ್ಷ ಸರ್ಕಾರಿ ನೌಕರರಾದರೂ ಇದ್ದೇ ಇರುವರು. ಅವರಿಗೇ ನಮ್ಮ ಭಾಷಣವನ್ನು ನಾವು ಹೇಳಬಹುದು ಎಂದು ಹೇಳಿ—ಅನಂತರ ಸಮ್ಮೇಳನ ಯಶಸ್ವಿಯಾಗಿ ಮುಕ್ತಾಯವಾದುದಕ್ಕೆ ಸಂತೋಷ ವ್ಯಕ್ತಪಡಿಸಿದರು. "ಬಹಳ ದಿನದಿಂದ ಎಲ್ಲೂ ಮಾತನಾಡಲು ಅವಕಾಶವೇ ಇರಲಿಲ್ಲ. ಈಗ ತಾವು ಕಲ್ಪಿಸಿಕೊಟ್ಟಿರಿ. ಅದೇ ಸಂತೋಷ" ಎಂದು ಮುಕ್ತಾಯಮಾಡಿದಾಗ ಉಳಿದ ಭಾಷಣಕಾರರು ಒಬ್ಬರ ಮುಖ ಮತ್ತೊಬ್ಬರು ನೋಡಿಕೊಂಡರು.

ಪ್ರಾತಃಸ್ಮರಣೆ

ಯಾರ ಹಣವನು ಸುಲಿದು ಬಾಳುವ ?
ಯಾರ ಮನೆಯನು ಮುರಿದು ಬಾಳುವ ?
ಯಾವ ಮೂರ್ತಿಗೆ ಟೋಪಿ ಹಾಕುವ
ಅವರರಿಯದಂತೆ ||

ಯಾರ, ಹಣ, ಮನೆ, ಯಾದೊಡೇಂ, ದಿಕ್ಕಿಲ್ಲ
ದವನಿಗೆ, ಜಗತ್ಪತಿ, ಸೆರೆಮನೆ, ದಾರಿ
ತೋರಿಸದಂತೆ, ವೈದ್ಯೋರಿ ರಕ್ಷಿಸು
ನಮ್ಮನನವರತ ||

—ಬೀಳಯಂಗಿರಿಯುವ.

ಕೃತಕ ದಂತಿ

ನೂರು ರೂಪಾಯಿ ತೆತ್ತು ನಾಜೂಕಾದ ಥಳಥಳಿಸುವ ಹೊಚ್ಚ ಹೊಸ ದಂತ ಪಂಙ್ತ್ತಿ ಧರಿಸಿದ್ದ ದಾಮೋದರನ್. ಆದರೂ ಆ ಸೊಟ್ಟ ಮೂತಿ, ಕೆಟ್ಟ ನೋಟ ಹೋಗಲಿಲ್ಲ ಅವನಿಗೆ. ನಮ್ಮ ಸಾಲಲ್ಲೇ ಕೂತಿದ್ದ ಊಟಕ್ಕೆ ಅವತ್ತು. "ಯಾಕೆ ದಾಮೋದರನ್ ಇನ್ನೂ ಆಂಬೊಡೆ ಅಗಿಯಲು ತಾಪತ್ರಯವೇ" ಎಂದು ಕೇಳಿದೆ. ಹಿಂದೆ ಮುಂದೆ ನೋಡಿ ಎರಡು ಸಾಲು ದಂತಾವಳಿಯನ್ನೂ ಹೊರಕ್ಕೆ ತೆಗೆದು ಪಕ್ಕದಲ್ಲಿಟ್ಟು ಗಟಗಟನೆ ಎರಡು ದೊನ್ನೆ ಖೀರು ಕುಡಿದುಬಿಟ್ಟ. "ಇದೇನು ದಾಮೂ ನಿನ್ನ ಅವಸ್ಥೆ?" ಎಂದೆ. ಅವ "ಹಾಳು ಏನು ಉಂಡರೂ ಇನ್ನೊಬ್ಬರ ಹಲ್ಲಲ್ಲಿ ಅಗಿದ ಹಾಗಾಗುತ್ತೆ ಆ ಹಾಳು ಹಲ್ಲುಸಾಲು ಹಾಕ್ಕೊಂಡರೆ. ಅಗಿದ ಅನ್ನ, ಮೆದ್ದ ಮಸಾಲೆ ವಡೆ ಯಾರೋ ಅಗಿದ ಹಾಗಿರುತ್ತೆ ಈ ಎರಡು ದೊನ್ನೆ ಖೀರೇ ನನ್ನ ಸ್ವಂತ ಬಾಯಲ್ಲಿ ತಿಂದ ಹಾಗಿತ್ತು ನೋಡು—ಮಿಕ್ಕದ್ದೆಲ್ಲಾ ಆ ಹಲ್ಲು ಡಾಕ್ಟರು ಹುಸೇನಿ ಬಾಯಲ್ಲೇ ತಿಂದಹಾಗಿತ್ತು ಎಂದು ಮತ್ತೆರಡು ದೊನ್ನೆ ಖೀರು ಹೀರಿ ಎದ್ದೇಬಿಟ್ಟ ಭೂಪತಿ.

—ಯಜ್ಞಪಶು.

———o———

ಎಪ್ಪತ್ತು ವರ್ಷಕೆ ಸತ್ತೆ ನಾನು,
ಒಪ್ಪತ್ತೂಟ, ಒಣಗಿದೆ, ಕೊರಗಿದೆ,
ಯಾವ ಹೆಣ್ಣಿಗು ಪತಿಎನಿಸದೆ!
ಅಪ್ಪನೂ ಹೀಗೆಯೆ ಮಡಿದಿದ್ದಿದ್ದರೆ!

* * *

ಬೋರ ಎದ್ದ; ಕೆರೆಗೆ ಬಿದ್ದ;
ಬೋರಬಿದ್ದ ತಾವಿನಿಂದ
O
O
O
ಮೂರು ಗುಳ್ಳೆ ಎದ್ದಿತು.

ವಿಜ್ಞಾನ ಮಾರ್ತಾಂಡರ ಗಮನಕ್ಕೆ

ಮಾನ್ಯ ಸಂಪಾದಕರಿಗೆ,

ತಾವು ಹಿಂದೆ ಸೂಚಿಸಿದ್ದಂತೆ, ಜನಜೀವನಕ್ಕೆ ಅತ್ಯವಶ್ಯಕವಾಗಿ ಬೇಕಾಗುವ ಪದಾರ್ಥಗಳ ಪಟ್ಟಿಯನ್ನು ತಮ್ಮುಂದಿಟ್ಟಿದೇನೆ. ತಾವು ನನ್ನಪರವಾಗಿ ವಿಜ್ಞಾನ ಮಾರ್ತಾಂಡರಿಗೆ ಬರೆದು ಈ ಪದಾರ್ಥಗಳನ್ನು ತರಿಸಿಕೊಡಿ. ಇನ್ನೂ ಇದೇ ತರಹ ಅನೇಕವು ನಮ್ಮ ಜನಗಳಿಗೆ ಬೇಕೂಂತ್ಲೂ ಅವುಗಳಿಗೆ ಆರ್ಡರ್ ಇವುಗಳು ತಲ್ಪಿದ ತಕ್ಷಣ ಇಡ್ತಾರೆಂತ್ಲೂ ತಿಳ್ಸಿ. ಈ ಪಟ್ಟಿಯನ್ನು ನೋಡಿದ್ರೆ, ಅವುಗಳ ಅವಶ್ಯಕತೆ ತಮಗೆ ಗೋಚರವಾಗುವುದರಲ್ಲಿ ಸಂದೇಹವಿಲ್ಲ. ಆದ್ದರಿಂದ ನಮ್ಮ ಕೆಲ್ಸಕ್ಕೆ ತಾವು ನೆರವಾಗುತ್ತೀರೆಂದು ನಂಬುತ್ತೇನೆ.

೧. **ಕನ್ನಡಕ**:—ಯಾವುದನ್ನು ಧರಿಸಿ ಪತ್ರಿಕೆಗಳನ್ನು ಓದಿದರೆ, ಸರ್ವೇಸಾಮಾನ್ಯವಾದ ಜಿಲ್ಲಾಧಿಕಾರಿಗಳ ಪ್ರವಾಸ, ಲಾರಿ ಡಿಕ್ಕಿ, ಸೊಸೆ ಭಾವೀಗೆ ನೆಗೆದಿದ್ದು, ಇಂತಹ ವಿಷಯಗಳನ್ನು ತೋರಿಸದೆ ಮುಖ್ಯವಾದ ವಿಷಯಗಳು ಮಾತ್ರ ಕಾಣಿಸುವ ಹಾಗೆ ಮಾಡುತ್ತೋ ಅದು.

೨. **X-ರೇ**:—ಯಾವ ಕಿರಣಗಳು ಟಾರ್ಚ್‌ನಲ್ಲಿ ಲೈಟ್ ಬಿಟ್ಹಾಗೆ ಬಿಟ್ರೆ, ಉಕ್ಕಿನ ಬೀರೂನಲ್ಲಿರೋ ಪ್ರಶ್ನೆಪತ್ರಿಕೆಗಳ ರೂಪವನ್ನು ಹೊರಗೆಡಹುತ್ತವೋ ಅವು.

೩. **ವಾಕಿಂಗ್ ಸ್ಟಿಕ್**:—ಯಾವುದು, ಮನೇಲಿಟ್ಟಿದ್ದಾಗ ಆಗಲಿ, ಹೊರಗಡೆ ತಕೊಂಡ್ಹೋಕ್ತಾ ಇದ್ದಾಗಾಗಲಿ, ಓಟು ಬೇಟೆಗೆ ಬಂದವರನ್ನು ತನ್ನಷ್ಟಕ್ಕೆ ತಾನೇ ಆಚೆ ಬೀದೀತನಕ ಓಡಿಸ್ಕೊಂಡ್ಹೋಗಿ ಕಾಲ್ಮುರಿಯುತ್ತೊ ಅದು. ಇದು ಬಹಳ ಅರ್ಜೆಂಟಾಗಿ ಬೇಕು.

೪. **ತೂಕದ ಬಟ್ಟುಗಳು**:—ವ್ಯಾಪಾರಸ್ಥ ಅವುಗಳ ತಲೆ ಚೆಚ್ಚಿದಾಗ, ಮೇಲಕ್ಕೆಗರಿ ಅವನ ತಲೆ ಚೆಚ್ಚುತ್ತವೋ ಅವು.

೫. **ಮಾತ್ರೆಗಳು:**—ಬಾಕಿಯವರಿಗೆ ಅವನ್ನು ಕೊಡಲು ಹೋದಾಗ ತಕ್ಷಣ ಹಾವಾಗಿ ಅವರನ್ನು ಕಚ್ಚೋದು.

೬. **ಪ್ಲಾಟ್‌ಫಾರಂ:**— ......ಟೋಪಿಯವರು ಅರಚಿಕೊಳ್ಳೋದಕ್ಕೆ ಹತ್ತಿದಾಗ ತಕ್ಷಣ ಭೂಕಂಪ ಆದ್ಹಾಗೆ ಅದುರಿ, ಬಿರುಕುಬಿಟ್ಟು, ಅವರ್ನ ಒಳಕ್ಕೆಳಕೊಳ್ಳೋದು.

೭. **ಪೌಂಟೆನ್ನುಪೆನ್ನು:**—ಸೊಸೈಟಿ ಮತ್ತು ಸಂಘಗಳಲ್ಲಿ ತಪ್ಲೆಖ್ಖ ಬರೆಯೊಕ್ಕೆ ಹೋದ ತಕ್ಷಣವೇ ಕಣ್ಣು ಕುಕ್ಕೋ ಅಂಥಾದ್ದು.

೮. **ಪಿಟೀಲು:**—ಕುಯ್ಯೋವ್ನು ಅದನ್ನ "ಅಯ್ಯೊ" ಅನ್ನಿಸ್ದಾಗ ಬಿಲ್ಲು ಕಿತ್ತು ಕಪಾಳಕ್ಕೆ "ಫಟೀರ್" ಅಂತ ಬಿಗಿಯೋದು.

೯. **ಚಾಕ್‌ಪೀಸ್:**—ಮೇಷ್ಟ್ರು ಸರಿಯಾಗಿ ಹೇಳೋದಕ್ಕೆ ತೊದಲಿ, ತಪ್ಪ್ಹೇಳ್ತಾ ಇದ್ದಾಗ, ಆವ್ನ ಬೆರಳು ಜಿಗುಟಿ ಸರಿಯಾಗಿ ಹೇಳೋ ಹಾಗೆ ಮಾಡೋದು.

ದಯವಿಟ್ಟು ಇವನ್ನು ಬೇಗ ತರಿಸ್ಕೊಟ್ರೆ, ನಾನು ನಿಮಗೆ ಕೃತಜ್ಞ.

ನಿಮ್ಮವ-ಖಂಡಿತ ನಿಮ್ಮವ,

ಚಾ. ವೆ.

ಮೊದಲು ಗಂಡ ಒಪ್ಪಿದಿರೆ
ತೊದಲೆ ಗತಿ ಸತಿಯರಿಗೆ
ಮತ್ತೆ ಅವರು ತಪ್ಪಿದರೆ
ಮರಳಿ ರೋದನ ಮಾಡು;
ಅತ್ತು ಮೂತಿ ತಿರುವುತ
ಮರಳಿ ರೋದನ ಮಾಡು!
ಹೊರಳಿ ರೋದನ ಮಾಡು!

ಸೀತಾಕಾಂತಸ್ಮರಣೆ

ಸೀತಾಪತಿ ಅಗ್ರಹಾರದ ಜಾನಕಿ ನಿಲಯದಲ್ಲಿ ಹಂದರ ಹಾಕಿದ್ದರು. ಸೀತಮ್ಮನೋರ ಮಗಳ ಮದುವೆ. ಸೀತಮ್ಮನೋರ ಯಜಮಾನರು ಇಡೀ ಅಗ್ರಹಾರಕ್ಕೇ ಆಹ್ವಾನ ಕೊಟ್ಟಿದ್ದರು. ಸೀತಮ್ಮನೋರ ಇಚ್ಛೆಯಂತೆ ಕುಡಿ ಬಾಳೆ ಎಲೆ ಹಾಕಿದ್ದರು; ಮುಂದೆ ರಂಗೋಲಿ ಹಾಕಿದ್ದರು; ಕೇಸರಿ ನೀರಿಟ್ಟಿದ್ದರು; ಕೂತ ಮಂದಿ ಹಿಂದಿನ ದಿನದಿಂದ ಉಪವಾಸವಿದ್ದು ಹಸಿದು ಬಂದವರು. ಅದಕ್ಕಾಗಿ ಕಾದಿದ್ದವರು. ಬರೀ ದರ್ಬಾರು ಕುಡಿಬಾಳೆ ಎಲೆ, ಅದ್ಧೂರಿಯ ವಾಲಗವಾದರೆ ಹೊಟ್ಟೆ ತುಂಬೀತೆ? ಖೀರು, ಜಹಂಗೀರು ಇರಲಿ; ನೀರು ಉಪ್ಪು ಕೂಡ ಬಂದವರಿಗೆ ಬಂತು ಇಲ್ಲದವರಿಗೆ ಇಲ್ಲವೆಂಬಂತೆ ಆಯಿತು. ಶೀನಪ್ಪ ಅಗ್ರಹಾರದ ಪ್ರತಿ ಮದುವೆಯ ಹಂದರದಲ್ಲೂ ಕರೆಯಲಿ ಕರೆಯದಿರಲಿ ಲೋಟ ಹಿಡಿದು ಹೊರಡುವ ನಿಗರ್ವಿ. ಹೊಟ್ಟೆ ಕೆಟ್ಟದ್ದು; ಪಾಪ ಸಂಸಾರಂದಿಗ, ದೊಡ್ಡ ಹೊಟ್ಟೆಯವ. ಅವನಿಗೆ ಅತೃಪ್ತಿ ಹಿಡಿಸದು. ಎದ್ದು ನಿಂತು ಗಟ್ಟಿಯಾಗಿ ಕೂಗಿಬಿಟ್ಟ ಮೂರು ಸಲ "ರೇರ್ಷ ಕಾಲೇ ಸೀತಾ ಕಾಂತ ಸ್ಮರಣೇಽಽ" ಎಂದು. ಕೂತ ಜನರೂ ಧ್ವನಿಗೂಡಿಸಿ ಕೈತೊಳೆಯಲು ಎದ್ದುಬಿಟ್ಟರು. ಸೀತಾಕಾಂತರು ಕಂಗಾಲಾದರು. ಸೀತಮ್ಮನವರು ಸೋತು ಸೀದ ಸಾಸುವೆ ಕಾಳಾದರು.

— ಸೋಮಭಟ್ಟ.

—o—

ಮೇಜರ್ ಜ॥ ಅಕ್ಬರ್ ಖಾನ್‌ರವರು ಭಾರತದ ಮುಖಂಡರಿಗೆ ಬರೆದ ಪತ್ರವನ್ನು ಜ॥ ಜಫರುಲ್ಲಾಖಾನ್‌ರು ಇನ್ನೂ ತಯಾರಿಸಿಲ್ಲವಂತೆ.

* * *

ಮದುವೆಯಾದೋನು ನರಳೋದು ನ್ಯಾಯ. ಆ ಸಂದರ್ಭದಲ್ಲಿ ಈ ಧ್ವನಿವರ್ಧಕಗಳನ್ನು ಹಾಕಿ ನಮ್ಮನ್ನು ಪರೀಕ್ಷೇಲಿ ನರಳೋಹಾಗೆ ಮಾಡೋದು ಯಾವ ನ್ಯಾಯ? ಎಂದು ವಿದ್ಯಾರ್ಥಿಗಳೊಬ್ಬರು ಬರೆದಿದ್ದಾರೆ.

* * *

ಕೊರವಂಜಿ

ಬಳೇಪೇಟೆ : : ಬೆಂಗಳೂರು 2

ಬಿಡಿ ಪ್ರತಿ ಕೇವಲ ನಾಲ್ಕಾಣೆ

ವಾರ್ಷಿಕ ಚಂದಾ: ಕೇವಲ 3 ರೂ. ಗಳು (ಅಂಚೆ ವೆಚ್ಚ ಸಹಿತ)

ನಮ್ಮ ಹೊಸ ಮಾರಾಟಗಾರರು

ನಾಗೇಂದ್ರ ಬುಕ್ ಡಿಪೊ ಮತ್ತು
ಜನರಲ್ ಸ್ಟೋರ್ಸ್

ಚಾಮರಾಜನಗರ.

30-3-51 ನೇ ಶುಕ್ರವಾರದಿಂದ

ಅಮೋಘ ಪ್ರಾರಂಭ

ಬೆಂಗಳೂರು ಗೀತಾ ಮತ್ತು ಶ್ರೀ

ಚಿತ್ರಮಂದಿರಗಳಲ್ಲಿ

ವಿಜಯ ರವರ...

ಪಾತಾಳ ಭೈರವಿ

Direction


K.V. REDDI, B.Sc. (Hons)





Produced by - **NAGI REDDI-CHAKRAPANI**

Vijaya Talkie Distributors Release.


ಶೀಘ್ರದಲ್ಲಿಯೇ ಬರುತ್ತದೆ!
ಒಂದು ರಾತ್ರಿ
(ತಮಿಳು)
ONE Night
ಕಥೆಮತ್ತು,ಸಂಭಾಷಣೆ:
C.N. ಅಣ್ಣಾತುರೈ, MA,
AVM
PRODUCTIONS
a TALLAM RELEASE

REG. No. M. 4718 KORAVANJI APRIL 1951

Printed by B. S. Iyengar, Bangalore City
Publisher—B. N. Gupta. Editor—M. Sivaram.